ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 81 ಸಂಚಿಕೆ- 81 | PAGE- 8 ಪುಟ-8 | ಭಾನುವಾರ 04.05.2025 | RS.2/- ಬೆಲೆ 2/-

# ಜಾತಿ ವ್ಯವಸ್ಥೆ ನಿಂತ ನೀರಿನಂತೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಮೇ 3:ಸಂವಿಧಾನ ರಕ್ಷಣೆ ಆದರೆ ನಮ್ಮ ಹಕ್ಕುಗಳೂ ರಕ್ಷಣೆಯಾಗುತ್ತವೆ.ಸಂವಿಧಾನ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ.ಸಂವಿಧಾನಕ್ಕೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಂದು ಯಲಹಂಕದಲ್ಲಿ 14 ಅಡಿಗಳ ಬಾಬಾ ಸಾಹೇಬ್ ಅಂಬೇಡ್ಕರ್ ಕಂಚಿನ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ನಮ್ಮ ದೇಶ, ನಮ್ಮ ಸಮಾಜಕ್ಕೆ ಅವಶ್ಯವಾಗಿದ್ದಂತಹ ಅತ್ಯುತ್ತಮ ಸಂವಿಧಾನವನ್ನು ನೀಡಿದವರು ಬಾಬಾ ಸಾಹೇಬ್ ಅಂಬೇಡ್ಕರ್. ಈ ದೇಶದ ಸಾಮಾಜಿಕ ಪರಿಸ್ಥಿತಿ, ಜಾತಿ ವ್ಯವಸ್ಥೆ ಅಂಬೇಡ್ಕರ್ ಅವರಿಗೆ ಅರ್ಥ ಆದಷ್ಟು ಬೇರೆಯವರಿಗೆ ಆಗಿರಲಿಲ್ಲವೆಂದರೆ ಅದು ಅತಿಶಯೋಕ್ತಿಯಲ್ಲ. ಜಾತಿ ವ್ಯವಸ್ಥೆ ಇದ್ದಷ್ಟೂ ಕಾಲ ಮೀಸಲಾತಿ ಇರಲೇಬೇಕು ಎಂಬುದನ್ನು ಅವರು ಬಲವಾಗಿ ನಂಬಿದ್ದರು ಎಂದರು.

ನಮ್ಮ ದೇಶದ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ. ಆದರೆ ವರ್ಗಕ್ಕೆ ಚಲನೆಯಿದೆ. ನಮ್ಮ ಸಮಾಜದಲ್ಲಿ ಶ್ರೀಮಂತ ಬಡವನಾದರೂ, ಬಡವ ಶ್ರೀಮಂತನಾದರೂ ಕಡೆಯವರೆಗೂ ಉಳಿದು ಕೊಳ್ಳುವುದು ಹುಟ್ಟಿದ ಜಾತಿಯಲ್ಲಿ ಮಾತ್ರ. ಆದ್ದರಿಂದ ಈ ಜಾತಿ ವ್ಯವಸ್ಥೆ ನಿಂತ ನೀರಿನಂತೆ. ಇದನ್ನು ಮನಗಂಡಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸ್ವಾತಂತ್ರ್ಯ ಯಶಸ್ಸನ್ನು ಕಾಣಬೇಕಾದರೆ ಈ ದೇಶದ ಅವಕಾಶ ವಂಚಿತರು, ಶೋಷಿತರು, ದೌರ್ಜನ್ಯಕ್ಕೆ ಒಳಗಾದವರಿಗೆಲ್ಲರಿಗೂ ಸಮಾನ ಅವಕಾಶಗಳು ದೊರೆತು ಅವರೆಲ್ಲರೂ ಸಾಮಾಜಿಕವಾಗಿ, ಆರ್ಥಿಕವಾಗಿ




ಸಬಲರಾದಾಗ ಮಾತ್ರ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಸಿಗುತ್ತದೆ ಎಂದು ಹೇಳಿದ್ದರು ಎಂದರು.

ಸ್ವಾತಂತ್ರ್ಯಾ ನಂತರ ಒಬ್ಬ ವ್ಯಕ್ತಿ, ಒಂದು ಮತ ಜಾರಿಗೆ ಬಂದಿದೆ. ಇದು ಈ ದೇಶದ ರಾಷ್ಟ್ರಪತಿಗಳಿಗೂ ಒಂದೇ. ಒಬ್ಬ ಪೌರಕಾರ್ಮಿಕನಿಗೂ ಒಂದೇ. ಬಸವಣ್ಣನವರು ಹೇಳಿದ್ದು ಇದನ್ನೇ. ಅಂಬೇಡ್ಕರ್ ಅವರು ಕೂಡಾ ಬಸವಣ್ಣನವರ ವಚನಗಳನ್ನು ಓದಿದ್ದರು ಎಂಬುದು ಅವರ ಬರಹಗಳಿಂದ ತಿಳಿದು ಬರುತ್ತದೆ. ಸಮಾಜದಲ್ಲಿ ಯಾವ ಕೆಲಸವೂ ಮೇಲೂ ಅಲ್ಲ, ಕೀಳೂ ಅಲ್ಲ. ಎಲ್ಲವೂ ಸಮಾನ ಎಂದೇ ಪ್ರತಿಪಾದಿಸಿದರು ಎಂದರು.

ನಮಗೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆ ಆದರೆ ಸಾಮಾಜಿಕ ಆರ್ಥಿಕ ಸಿಕ್ಕಿಲ್ಲ. ಎಲ್ಲಿವರೆಗೂ ಇದು ಸಿಗುವುದಿಲ್ಲ ಅಲ್ಲಿಯವರೆಗೆ ಸಮಾಜದಲ್ಲಿ ಸಮಾನತೆ ಕಾಣಲು ಸಾಧ್ಯವಿಲ್ಲ. ನಮ್ಮ ಸರ್ಕಾರವು ಇದನ್ನೇ ನಂಬಿದ್ದು, ನಾವು ರೂಪಿಸುತ್ತಿರುವ ಕಾರ್ಯಕ್ರಮಗಳೂ ಇದೇ ಹಿನ್ನೆಲೆಯಿಂದ ಮೂಡಿಬಂದಿವೆ ಎಂದರು.

ಜನರನ್ನು ಹಿಂದಕ್ಕೆ ಮಾತ್ರ ತಳ್ಳಬೇಡಿ. ಮುಂದಕ್ಕೆ ಎಳೆಯಲು ಪ್ರಯತ್ನ ಮಾಡಬೇಕು. ಮುಂದಕ್ಕೆ ಎಳೆಯಲು ಸಾಧ್ಯವಾಗದಿದ್ದರೆ ಅಲ್ಲೇ ಬಿಡಿ. ಆದರೆ ಹಿಂದಕ್ಕೆ ಮಾತ್ರ ತಳ್ಳಬೇಡಿ ಎಂದ ಮುಖ್ಯಮಂತ್ರಿಗಳು ಅಂಬೇಡ್ಕರ್ ಅವರು ತಾವು ಓದಿಕೊಂಡಿರುವುದು ಸ್ವಾರ್ಥಕ್ಕಾಗಿ ಅಲ್ಲ, ಅಸಮಾನತೆಯನ್ನು ಹೋಗಲಾಡಿಸಲು ಎಂದು ತಿಳಿಸಿದ್ದರು. ನಾವು ಸಾಧ್ಯವಾದಷ್ಟರ ಮಟ್ಟಿಗೆ ಅವರ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ನಮ್ಮ ಸರ್ಕಾರ ಆರ್ಥಿಕವಾಗಿ, ಸಾಮಾಜಿಕವಾಗಿ ಜನರಲ್ಲಿ ಶಕ್ತಿ ತುಂಬಲು ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿದೆ. ಆರ್ಥಿಕವಾಗಿ ಶಕ್ತಿ ತುಂಬದಿದ್ದರೆ ಅಸಮಾನತೆ ಹೋಗಲಾಡಿಸಲು

ಸಾಧ್ಯವಿಲ್ಲ. ಎಲ್ಲರನ್ನೂ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಬೇಕು. ಒಂದೇ ಬಾರಿಗೆ ಎಲ್ಲರನ್ನೂ ಮುಖ್ಯವಾಹಿನಿಗೆ ತರಲು ಸಾಧ್ಯವಾಗದಿದ್ದರೂ ಕ್ರಮೇಣವಾಗಿ ಮಾಡಲು ಪ್ರಯತ್ನ ಮಾಡಬೇಕು.

ನಮ್ಮ ಹೋರಾಟ ನಿರಂತರವಾಗಿರಬೇಕು. ಅದಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಶಿಕ್ಷಣ,

(2ನೇ ಪುಟ ನೋಡಿ)

## ಬರೀ ಭಾಷಣ ಮಾಡ್ಕೊಂಡು ಕೂತ್ರೆ ಆಗಲ್ಲ, ಕೆಣಕಿದವರಿಗೆ ತಕ್ಕ ಉತ್ತರ ನೀಡಿ: ಖರ್ಗೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಮೇ.3: ಬರೀ ಭಾಷಣ ಮಾಡಿಕೊಂಡು ಕುಳಿತರೆ ಆಗಲ್ಲ. ನಮ್ಮನ್ನ ಕೆಣಕಿದವರಿಗೆ ತಕ್ಕ ಉತ್ತರ ಕೊಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಕಲಬುರಗಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದೇಶದ ಐಕ್ಯತೆಗಾಗಿ ಮೋದಿ ಸರ್ಕಾರ ಏನೇ ಕ್ರಮ ಕೈಗೊಂಡರೂ ನಮ್ಮ ಬೆಂಬಲವಿದೆ. ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಮ ಕೈಗೊಳ್ಳಬೇಕು. ಆದರೆ ಇದರಲ್ಲೂ ರಾಜಕೀಯ ಆಗಬಾರದು. ನಮ್ಮ ದೇಶದನ್ನು ಕೆಣಕಿದ್ರೆ ನಾವು ಸುಮ್ಮನಿರಬಾರದು. ಪಾಕಿಸ್ತಾನದ ಮೇಲೆ



ಕ್ರಮ ಆಗಲಿ ಎಂದು ನಾವು ಬೆಂಬಲ ಕೊಟ್ಟಿದ್ದೇವೆ.

ನಮಗೆ ದೇಶ ಮುಖ್ಯ. ಹೀಗಾಗಿ ಯಾವುದೇ ಕ್ರಮ ಕೈಗೊಂಡರೂ ನಮ್ಮ ಬೆಂಬಲ ಇರುತ್ತದೆ

ಎಂದರು. ಜಾತಿ ಜನಗಣತಿ ಬಗ್ಗೆ ನಾವು ಮೊದಲೇ ಆಗ್ರಹಿಸಿದ್ದೆವು. ಆದರೆ ಆಗ ಜಾತಿ ವಿಷಬೀಜ ಬಿತ್ತುತ್ತಾರೆ ಎಂದು ನಮ್ಮನ್ನು ಹೀಯಾಳಿಸಿದ್ದರು. ಬಿಹಾರ ಚುನಾವಣಾ ಗಿಮಿಕ್ ಇರಬಹುದು. ಆದರೆ ನಾನು ಅದರ ಬಗ್ಗೆ ಮಾತನಾಡಲ್ಲ.ದುರುದ್ದೇಶದಿಂದ ನೀವು ನಡೆದುಕೊಂಡರೆ ಯಾರೂ ಸಹಿಸಲ್ಲ. ಒಳ್ಳೆಯ ಉದ್ದೇಶದಿಂದ ಮಾಡಿ ಎಂದು ತಿಳಿಸಿದರು.

## ಕಾಂಗ್ರೆಸ್ ದುರಾಡಳಿತದಲ್ಲಿ ಯಾರಿಗೂ ನೆಮ್ಮದಿಯಿಲ್ಲ : ಬಿ.ವೈ.ವಿಜಯೇಂದ್ರ

ಮಲ್ಲಮ್ಮನುಡಿವಾರ್ತೆ ಬೆಂಗಳೂರು, ಮೇ 3: ಕಾಂಗ್ರೆಸ್ ಸರ್ಕಾರದ ದುರಾಡಳಿತದಲ್ಲಿ ಯಾರಿಗೂ ನೆಮದಿಯಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.ಈ ಸಂಬಂಧ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು ಕೆಎಎಸ್ ಪರೀಕ್ಷೆಗೆ ಸಂಬಂಧಿಸಿದಂತೆ ನೊಂದವರ ದನಿಯಾಗಿ ರಾಜ್ಯ ಬಿಜೆಪಿ ನಿಲ್ಲಲಿದೆ ಎಂದಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ ಕೆಎಎಸ್ ಪೂರ್ವಭಾವಿ ಪರೀಕ್ಷೆಯಲ್ಲಿನ ಭಾಷಾಂತರ ಎಡವಟ್ಟಿನಿಂದ ಅನ್ಯಾಯಕ್ಕೊಳಗಾಗಿದ್ದ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿ ಇಂದಿನಿಂದ



ಆರಂಭವಾಗಿರುವ ಮುಖ್ಯ ಪರೀಕ್ಷೆ ಬರೆಯಲು ಅವಕಾಶ ಪಡೆದಿದ್ದರು.ಆದರೆ, ಮಧ್ಯರಾತ್ರಿ ಅರ್ಜಿ ತುಂಬಿ ಪ್ರವೇಶ ಪತ್ರ ಪಡೆಯುವಂತೆ ಗೊಂದಲ ಸೃಷ್ಟಿಸಿರುವ ಕೆಪಿಎಸ್‌ಸಿ ಕಾರ್ಯವೈಖರಿ ಪರೀಕ್ಷಾರ್ಥಿಗಳಿಗೆ ಅನಗತ್ಯ ಕಿರುಕುಳ ನೀಡುವ ದುರುದ್ದೇಶವನ್ನು ಪ್ರತಿಬಿಂಬಿಸಿದೆ.

ಉದ್ಯೋಗಾಕಾಂಕ್ಷಿ ಅಭ್ಯರ್ಥಿಗಳ ಭವಿಷ್ಯದ ಜೊತೆ ಕೆಪಿಎಸ್‌ಸಿ ಚೆಲ್ಲಾಟವಾಡುತ್ತಿದ್ದರೆ ರಾಜ್ಯ ಸರ್ಕಾರ ಕಣ್ಣುಮುಚ್ಚಿಕೊಂಡು ನೋಡುತ್ತಿದೆ ಎಂದು ಟೀಕಿಸಿದ್ದಾರೆ.ಮೇ 2ರ

(2ನೇ ಪುಟ ನೋಡಿ)

## ಕೃಷ್ಣಾ ನದಿ ನೀರು ಹಂಚಿಕೆ ವಿವಾದ : ಮೇ 7ರಂದು ಕೇಂದ್ರ ಜಲಶಕ್ತಿ ಸಚಿವಾಲಯದಿಂದ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಮೇ.3: ಕೃಷ್ಣಾ ನದಿ ನೀರಿನ ಹಂಚಿಕೆ ವಿಚಾರವಾಗಿ ನ್ಯಾಯಾಧಿಕರಣದ ತೀರ್ಪಿನ ಅನ್ವಯ ರಾಜ್ಯದ ಪಾಲಿನ ನೀರು ಬಳಕೆಗೆ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಎಂದು ಇದೇ ತಿಂಗಳು 7ರಂದು ಕೇಂದ್ರ ಜಲಶಕ್ತಿ ಸಚಿವರು ಕರೆದಿರುವ ಸಭೆಯಲ್ಲಿ ಒತ್ತಡ ಹಾಕಲಾಗುವುದು. ಈ ಸಭೆಯ ನಂತರ ರಾಜ್ಯದಲ್ಲಿ ಸರ್ವಪಕ್ಷ ಸಭೆ ಕರೆದು ಚರ್ಚಿಸಲಾಗುವುದು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು. ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 2010ರಲ್ಲಿ ಕೃಷ್ಣಾ ನದಿ ನ್ಯಾಯಾಧಿಕರಣ ತೀರ್ಪಿನ ಬಗ್ಗೆ ಗೆಜೆಟ್ ಅಧಿಸೂಚನೆ ಹೊರಡಿಸುವ ಸಂಬಂಧ ಕೇಂದ್ರ ಸರ್ಕಾರದ ವಿರುದ್ಧ ಒತ್ತಡ ಹಾಕಿದ್ದೇವೆ. ಹೀಗಾಗಿ ಕೇಂದ್ರ ಸಚಿವರು ಕರ್ನಾಟಕ, ಆಂಧ್ರ, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳ ಸಚಿವರ ಸಭೆ ಕರೆದಿದ್ದು, ಈ ಸಭೆಯಲ್ಲಿ ರಾಜ್ಯದ



ನಿಲುವನ್ನು ಮಂಡಿಸುವ ಮುನ್ನ ಇಂದು ಪೂರ್ವಭಾವಿ ಸಭೆ ನಡೆಸಿದ್ದೇವೆ ಎಂದರು. ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಇಂದಿನ ಸಭೆಯಲ್ಲಿ ಕಾನೂನು ಸಚಿವರು, ಸಂಬಂಧಪಟ್ಟ ಎಲ್ಲಾ ಜಿಲ್ಲಾ ಸಚಿವರುಗಳಾದ ಆರ್.ಬಿ ತಿಮ್ಮಾಪುರ, ಎಂ.ಬಿ ಪಾಟೀಲ್, ಶಿವಾನಂದ ಪಾಟೀಲ್, ದರ್ಶನಾಪುರ ಅವರ ಜೊತೆ ಚರ್ಚೆ ಮಾಡಿದ್ದೇವೆ. ಸಚಿವರು ಅನೇಕ ಸಲಹೆಗಳನ್ನು ನೀಡಿದ್ದಾರೆ. ಈ ಮಧ್ಯೆ ದೆಹಲಿ ವಕೀಲರ ತಂಡ ಕೂಡ ಸಭೆಯಲ್ಲಿ ಇದ್ದರು.

ಮೇ 7ರ ಸಭೆಯಲ್ಲಿ ನಮ್ಮ ನಿಲುವು ಏನು, ನಮ್ಮ ತಂತ್ರಗಾರಿಕೆ ಏನು ಎಂದು ಚರ್ಚೆ ಮಾಡಲಾಗಿದೆ. ಕೇಂದ್ರದ ಸಭೆಯಲ್ಲಿ ಇಡೀ ತಂಡ ರಾಜ್ಯವನ್ನು ಪ್ರತಿನಿಧಿಸಿ ರಾಜ್ಯದ ನಿಲುವು ಮಂಡಿಸುತ್ತೇವೆ ಎಂದು ತಿಳಿಸಿದರು. ಈ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ಬೆಳಗಾವಿ ಅಧಿವೇಶನದಲ್ಲೇ ತೀರ್ಮಾನ ಮಾಡಿದ್ದೇವೆ. 2010ರಲ್ಲಿ ನ್ಯಾಯಾಧಿಕರಣದ ತೀರ್ಪು ಬಂದಿದ್ದು, ಈವರೆಗೂ ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿಲ್ಲ. ಕಳೆದ 15 ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಭಾರಿ ನಷ್ಟವಾಗಿದೆ. ಹೀಗಾಗಿ ಈ ವಿಚಾರವಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇವೆ. ಪ್ರತಿ ವರ್ಷ ಯೋಜನಾ ವೆಚ್ಚದ ಪ್ರಮಾಣವೂ ಏರಿಕೆಯಾಗುತ್ತಿದೆ. ನೀರು ಅನಗತ್ಯವಾಗಿ ಪೋಲಾಗುತ್ತಿದ್ದು, ಇದನ್ನು ಬಳಸಿಕೊಳ್ಳಲು ಒತ್ತಡ ಹಾಕುತ್ತಿದ್ದೇವೆ. ಕೇಂದ್ರ ಸರ್ಕಾರ ನಮ್ಮ ಪರಿಸ್ಥಿತಿ ಅರಿತಿದ್ದು ಸಭೆ ಕರೆದಿರುವುದು ಸ್ವಾಗತಾರ್ಹ ಎಂದರು.

## ಸಮಾನ ಹಕ್ಕು ನೀಡಿದ್ದು ಡಾ.ಅಂಬೇಡ್ಕರರ ಸಂವಿಧಾನ:ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಅಫಜಪುರ:ಮೇ.3:ಕಾರ್ಮಿಕರಿಗೆ ಮೊದಲು 14 ಗಂಟೆ ಕೆಲಸ ಮಾಡಿಸುವುದನ್ನು 8

ಗಂಟೆಗೆ ಇಳಿಸಿದವರು ಅಂಬೇಡ್ಕರ್ ಅವರು.1942 ರಿಂದ ಲೇಬರ್ ಕಾನ್ಫಿರೆನ್ಸ ಮಾಡಿದ್ದನ್ನು.2015 ರಿಂದ ಮೋದಿ ಅವರು ಅದನ್ನು ತಗೆದು ಹಾಕಿದರು.ಮಹಿಳೆಯರಿಗೂ

ಪುರುಷರಷ್ಟೆ ಸಮಾನ ಹಕ್ಕು ನೀಡಿದ್ದು ನಮ್ಮ ಸಂವಿಧಾನ. ರಿಜರ್ವ್ ಬ್ಯಾಂಕ್ ನಿರ್ಮಾಣವಾಗಿದ್ದು ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಲಹೆ ಮೇರೆಗೆ ಎಂದು ಡಾ.



ಮಲ್ಲಿಕಾರ್ಜುನ ಖರ್ಗೆ ಅವರು ತಿಳಿಸಿದರು.ಅವರು ಅಫಜಲಪೂರ ತಾಲೂಕಿನ ಗೊಬ್ಬೂರ(ಬಿ) ಯಲ್ಲಿ ಡಾ.ಅಂಬೇಡ್ಕರರ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದರು.

ಕೆಲವು ಮುಖಂಡರು ಹೇಳತಾರೆ ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷದವರನ್ನು ಸೋಲಿಸಿದ್ದಾರೆ ಎಂತ.ಆದರೆ ಅಂಬೇಡ್ಕರ್ ಅವರ ಆಶಯದಂತೆ ಎಲ್ಲಾ ಬಿಲಗಳನ್ನು ಪಾಸ್ ಮಾಡಿದವರು

(2ನೇ ಪುಟ ನೋಡಿ)

## ಪ್ರಕೃತಿ ಸಂರಕ್ಷಣೆಗೆ ಸ್ವಚ್ಛ ಭಾರತ ಮಿಷನ್ ಸಹಕಾರಿ :ಶಾಸಕ ಡಾ. ಸಿದ್ದು ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಸ್ಥಳೀಯ ಅಭಿವೃದ್ಧಿ ಮತ್ತು ಪ್ರಕೃತಿಯ ಸಂರಕ್ಷಣೆಗೆ ಸ್ವಚ್ಛ ಭಾರತ ಮಿಷನ್ ಯೋಜನೆ ಸಹಾಕರಿಯಾಗಿದೆ ಎಂದು ಶಾಸಕ ಡಾ. ಸಿದ್ದು ಪಾಟೀಲ್ ಹೇಳಿದರು.

ತಾಲೂಕಿನ ಹಳ್ಳಿಖಡ(ಬಿ) ಪಟ್ಟಣದ ಹೊರ ವಲಯದ ಬೇನಚಿಂಚೋಳಿ ರಸ್ತೆ ಬದಿಯಲ್ಲಿ ಕೇಂದ್ರ ಸರಕಾರದ ಸ್ವಚ್ಛ ಭಾರತ ಮಿಷನ್ ಯೋಜನೆ ವತಿಯಿಂದ ಶನಿವಾರ ನಡೆದ ಘನ ತ್ಯಾಜ್ಯ ಕಸ ವಿಲೇವಾರಿ ನೂತನ ಘಟಕ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಜನರ ಆರೋಗ್ಯ ಹಾಗೂ ಪರಿಸರ ಸಂರಕ್ಷಣೆಗಾಗಿ ಕೇಂದ್ರ ಸರಕಾರದ 2023-24ನೇ ಸಾಲಿನ 3.14ಕೋಟಿ ಅನುದಾನದಲ್ಲಿ ಹಳ್ಳಿಖೇಡ (ಬಿ) ಪಟ್ಟಣದಲ್ಲಿ ನೂತನ ಕಸ ವಿಲೇವಾರಿ ಘಟಕ ನಿರ್ಮಾಣ ಮಾಡಲಾಗುತ್ತಿದೆ. ಹೀಗಾಗಿ ಗುತ್ತಿಗೆದಾರು ಗುಣಮಟ್ಟದ ಕಾಮಗಾರಿ ಕೈಗೊಳಬೇಕು ಎಂದು ಸೂಚಿಸಿದರು.ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಯೂಸುಪ್ ಸೌದಾಗರ್, ಸುಶೀಲ ಮರಪಳ್ಳಿ, ಆರೀಪ್ ಬಾವಗಿ,ಮುರಳಿ ಕೋಷಣಗಿ, ಮುಖ್ಯಾಧಿಕಾರಿ ಸುನಿಲಕುಮಾರ, ಪ್ರಮುಖರಾದ ಅರುಣಕುಮಾರ ಬಾವಗಿ ಸೇರಿ ಪುರಸಭೆ ಸಿಬ್ಬಂದಿಗಳು ಉಪಸ್ಥಿತರಿದ್ದರು.



ತಾಲೂಕಿನ ಸಿಂಧನಕೇರಾ ಗ್ರಾಮದ ಹೊರ ವಲಯದಲ್ಲಿ ಪುರಸಭೆ ಹಾಗೂ ಸ್ವಚ್ಛ ಭಾರತ ಮಿಷನ್ ಯೋಜನೆ ಅಡಿಯಲ್ಲಿ ಶನಿವಾರ ಘನ ತ್ಯಾಜ್ಯ ಕಸ ವಿಲೇವಾರಿ ನೂತನ ಘಟಕ ನಿರ್ಮಾಣ ಕಾಮಗಾರಿಗೆ ಶಾಸಕ ಡಾ. ಸಿದ್ದು ಪಾಟೀಲ್ ಚಾಲನೆ ನೀಡಿದರು.

ಬಳಿಕ ಸಿಂಧನಕೇರಾ ಗ್ರಾಮಸ್ಥರು ಜಮಾಯಿಸಿ ಕಸ ವಿಲೇವಾರಿ ಮಾಡದ ಕಾರಣ ಸಿಂಧನಕೇರಾ ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಶೀಘ್ರಗತಿಯಲ್ಲಿ ಕಸ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಶಾಸಕ ಡಾ. ಸಿದ್ದು ಪಾಟೀಲ್ ಗೆ ಮನವಿ ಮಾಡಿದರು.

ಗ್ರಾಮಸ್ಥರು ಮಾಡುತ್ತಿರುವ ಮನವಿಯನ್ನು ಗಮನಿಸಿದ ಶಾಸಕ ಡಾ. ಸಿದ್ದು ಪಾಟೀಲ್ ಅವರು ಪುರಸಭೆ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡು ಶೀಘ್ರಗತಿಯಲ್ಲಿ ಕಸ ವಿಲೇವಾರಿ ಮಾಡುವಂತೆ ಸೂಚಿಸಿದರು.

ಈ ವೇಳೆ ಪುರಸಭೆ ಸದಸ್ಯರಾದ ರಮೇಶ ಕಲ್ಲೂರ್ ವಿಜಯಕುಮಾರ ದುರ್ಗದ್, ಸುನಿಲ ಪಾಟೀಲ್, ಧನಲಕ್ಷ್ಮಿ, ಮುಖ್ಯಾಧಿಕಾರಿ ಮೀನಾಕುಮಾರಿ ಬೋರಾಳಕರ್ ಸೇರಿ ಸಿಬ್ಬಂದಿಗಳು ಇದ್ದರು.

### ಮಾತಿನ ಚಕಮಕಿ; ಹಲ್ಲೆಗೆ ಯತ್ನ



ಕಸ ವಿಲೇವಾರಿ ವಿಷಯಕ್ಕೆ ಸಂಬಂಧಿಸಿದಂತೆ ಸಿಂಧನಕೇರಾ ಗ್ರಾಮದ ಹೊರ ವಲಯದ ಕಸ ವಿಲೇವಾರಿ ಘಟಕದ ಆವರಣದಲ್ಲಿ ಪುರಸಭೆ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಹಲ್ಲೆಗೆ ಯತ್ನಿಸಿದ ಘಟನೆ ಶನಿವಾರ ಜರುಗಿದೆ.

ಪುರಸಭೆ ಮುಖ್ಯಾಧಿಕಾರಿ ಮೀನಾಕುಮಾರಿ ಬೋರಾಳಕರ್ ಎದುರಲ್ಲೆ ಪುರಸಭೆ ಸಿಬ್ಬಂದಿ ವಿರುದ್ಧ ಸಿಂಧನಕೇರಾ ಗ್ರಾಮದ ನಿವಾಸಿಯೊಬ್ಬರು ಹಲ್ಲೆಗೆ ಮುಂದಾದ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ವಿಜಯಕುಮಾರ ದುರ್ಗದ್ ಹಾಗೂ ರಮೇಶ ಕಲ್ಲೂರ್ ಮಧ್ಯೆ ಪ್ರವೇಶಿಸಿ ಶಾಂತಿ ಸಂಧಾನ ಮಾಡುವ ಮೂಲಕ ಸಮಸ್ಯೆ ತಿಳಿಗೊಳಿಸಿದರು.

## ಕಾಶಿ ಮಾದರಿಯಲ್ಲಿ ಗಾಣಗಾಪೂರ ಅಭಿವೃದ್ಧಿ: 200 ಕೋಟಿ ರೂ. ಮೊತ್ತದ ಮಾಸ್ಟರ್ ಪ್ಲ್ಯಾನ್ ಸಿದ್ಧ:ಬಿ.ಫೌಜಿಯಾ ತರನ್ನುಮ್



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.3 ಜಿಲ್ಲೆಯ ಅಫಜಲಪೂರ ತಾಲೂಕಿನ ಸುಪ್ರಸಿದ್ಧ ದೇವಲ ಗಾಣಗಾಪೂರದ ಶ್ರೀ ದತ್ತಾತ್ರೇಯ ದೇವಸ್ಥಾನ ಸೇರಿದಂತೆ ಧಾರ್ಮಿಕ ಕೇಂದ್ರವಾಗಿರುವ ದೇವಲ ಗಾಣಗಾಪೂರವನ್ನು ಕಾಶಿ ಮಾದರಿಯಲ್ಲಿ ಸಮಗ್ರ ಅಭಿವೃದ್ಧಿಗೆ 200 ಕೋಟಿ ರೂ. ಮೊತ್ತದ ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಇತ್ತೀಚೆಗೆ ಮಾಧ್ಯಮದಲ್ಲಿ ಸುದ್ದಿಗಳು ಬಿತ್ತರವಾದ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಿರುವ ಜಿಲ್ಲಾಧಿಕಾರಿಗಳು, ಪಟ್ಟಣದಲ್ಲಿ ನಾಲ್ಕು ಲೇನ್ ರಸ್ತೆ, ಸಂಗಮ ಮತ್ತು ಅಷ್ಠ ತೀರ್ಥ ಸ್ಥಳಗಳ ಅಭಿವೃದ್ಧಿ, ಒಳಚರಂಡಿ, ಎಸ್.ಟಿ.ಪಿ ಘಟಕ ಸ್ಥಾಪನೆ, ನಾಗರಿಕ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

# ಡಾ.ಅಂಬೇಡ್ಕರರ ಸಂವಿಧಾನ:ಖರ್ಗೆ

ಕಾಂಗ್ರೆಸ್ ಪಕ್ಷದವರು.ಸಾಮಾಜಿಕ ನ್ಯಾಯದ ಬಗ್ಗೆ ಅರಿವಿರದವರು ಇಂದು ಕಾಂಗ್ರೆಸ್ ಪಕ್ಷದ ಬಗ್ಗೆ ಮಾತಾಡ್ತಾರೆ. ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಎಸ್.ಎ ಡಾಂಗೆ ಮತ್ತು ಸಾವರ್ಕರ್ ಎಂದು ಅಂಬೇಡ್ಕರ್ ಅವರು ಸ್ವತಃ ತಾವೇ ಪತ್ರದಲ್ಲಿ ಬರೆದಿದ್ದಾರೆ ಎಂದರು.ಸಂವಿಧಾನ ಎಷ್ಟೇ ಒಳ್ಳೆಯದಾಗಿದ್ದರು ಅದನ್ನು ಪರಿಪಾಲನೆ ಮಾಡದೆ ಇರುವವರು ಸರಿಯಾಗಿ ಇರದಿದ್ದರೆ ಸಂವಿಧಾನ ಕೆಟ್ಟದಾಗಿ ಕಾಣುತ್ತದೆ ಎಂದರು.

ಹೆಣ್ಣು ಮಕ್ಕಳಿಗೆ ಮತದಾನದ ಹಕ್ಕನ್ನು ನೀಡದಂತೆ ಹೋರಾಟ ಮಾಡಿದ ಜನ ಇಂದಿಗೂ ಕೂಡಾ ಬೇರೆ ಪಕ್ಷದಲ್ಲಿದ್ದಾರೆ.ಆದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು 18 ವರ್ಷದ ಪ್ರತಿ ಪುರುಷ ಹಾಗೂ ಮಹಿಳೆಯರಿಗೆ ಮತದಾನದ ಹಕ್ಕು ನೀಡಿದ್ದರು. ಎಷ್ಟೇ ಬಲಾಢ್ಯರಾಗಿದ್ದರೂ ಎಲ್ಲರಿಗೂ ಕೇವಲ ಒಂದೇ ಓಟು.ಇದರಿಂದ ಎಲ್ಲರಿಗೂ ಸಮಾನ ಹಕ್ಕು ನೀಡಿದ ಮಹಾನ ವ್ಯಕ್ತಿ ಎಂದರೆ ಅದು ಅಂಬೇಡ್ಕರ್ ಅವರು.ನಾವೆಲ್ಲರೂ ಅಂಬೇಡ್ಕರ್ ಅವರನ್ನ ಯಾಕೆ ನೆನೆಸಿಕೊಳ್ಳಬೇಕು ಎಂದರು ಸ್ವತಃಹ ಓದಿ ಜ್ಞಾನ ಪಡೆದು ಸಂವಿಧಾನ ಬರೆದಿದ್ದಾರೆ. ಅದೆಲ್ಲ ನಮ್ಮ ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸುವಂತೆ ಸಮಾನ ಸ್ವಾತಂತ್ರ್ಯ ಹಕ್ಕು ನೀಡಿದ್ದಾರೆ. ಸಂವಿಧಾನ ಬರೆಯುವ 7 ಜನರ ಕಮಿಟಿಯಲ್ಲಿ ಒಬ್ಬರು ಸಾವನಪ್ಪಿದರೆ,ಇನ್ನೊಬ್ಬರು ಅಮೇರಿಕಾ ಹೋದರೆ ಇನ್ನೊಬ್ಬರು ರಾಜ್ಯ ನೋಡಿಕೊಳ್ಳಲು ಬಿಜಿಯಾದರು.ಆದರೆ ಇನ್ನಿಬ್ಬರು ತಮ್ಮ ಕೆಲಸದಲ್ಲಿ ತಲ್ಲಿನರಾದರು.ಸಂವಿಧಾನ ಬರೆದಿದ್ದು ಕೇವಲ ಅಂಬೇಡ್ಕರ್ ಅವರು ಮಾತ್ರ.ಸಂವಿಧಾನ ಉಳಿಸುವ ಕೆಲಸ ನಾವು ನೀವೆಲ್ಲರೂ ಮಾಡಬೇಕು ಎಂದರು.

ಶಾಸಕರಾದ ಎಂ ವೈ ಪಾಟೀಲ್ ಅವರು ಮಾತನಾಡಿ,ವಿಚಾರಗಳು, ಸಾಧನೆಯ ಹಿರಿಮೆ ಗರಿಮೆಗಳು ನಮ್ಮ ಮನದಲ್ಲಿ ಸದಾ ಹಚ್ಚ ಹಸುರಾಗಿ ಅಚ್ಚಳಿಯದೇ ಉಳಿಯಬೇಕೆಂದರೇ ಆ ವ್ಯಕ್ತಿಯ ಭಾವ ಚಿತ್ರವೋ, ಪ್ರತಿಮೆಯೋ ನಮ್ಮ ಮುಂದೆ ನಿರ0ತರಾವಗಿ ಇರಬೇಕು. ಆ ಮೂಲಕ ಅವರು ನಮಗೆ ನಿರಂತರ ಸ್ಪೂರ್ತಿಯ ನೆಲೆಯಾಗಬಲ್ಲದುಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಈ ಪ್ರತಿಮೆ ಆರಾಧನೆಗೆ ಅಲ್ಲ, ಬದಲಾಗಿ, ಅವರ ತತ್ವ ಸಿದ್ಧಾಂತಗಳ ಆಚರಣೆ ಹಾಗೂ ಅನುಷ್ಠಾನಕ್ಕಾಗಿ. ಡಾ. ಬಾಬಾಸಾಹೇಬ್ ಅಂಬೇಡ್ಕರರೆಂದರೇ, ಸ್ವಾತಂತ್ರ್ಯ ಪ್ರಜಾಪ್ರಭೂತ್ವ ಸೆಕ್ಯೂಲರ್ ನಿಲುವು, ಜಾತ್ಯಾತೀತ ದೃಷ್ಟಿ, ಸ್ವಾಭೀಮಾನದ ಸಮಾನತೆಯ ಬದುಕು, ಸರ್ವಾಭ್ಯುದಯದ ಅಭೀಪ್ಷೆ!ಸ್ವಾತಂತ್ರ್ಯೋತ್ರರ ಭಾರತದಲ್ಲಿ ಈ ತತ್ವಗಳ ಆಧಾರದ ಮೇಲೇಯೇ ತಮ್ಮ ಬದುಕನ್ನು ರೂಪಿಸಿಕೊಂಡು ಸಮಸ್ತ ನಾಡಿಗರ, ಸಮಗ್ರ ದೇಶಿಗರ ಬದುಕನ್ನು ರೂಪಿಸಲು ಧೀಮಂತಿಕೆಯ ಹೆಜ್ಜೆಯಿಡುತ್ತಿರುವ ಡಾ. ಮಲ್ಲಿಕಾರ್ಜುನ ಖರ್ಗೆಜಿ ಯವರು ಈ ಮೂರ್ತಿಯನ್ನು ಅನಾವರಣಗೊಳಿಸಲು ಒಪ್ಪಿ ಗೊಬ್ಬರ (ಬಿ) ಗ್ರಾಮಕ್ಕೆ ಬಂದಿರೋದು, ಗ್ರಾಮ ಹಾಗೂ ಇಡೀ ತಾಲೂಕಿನ ಸುಯೋಗವಾಗಿದೆ. ಎಂದರು.

ಶ್ರೀ ಶ್ರೀ ಷ. ಬ್ರ. ಸಿದ್ಧರಾಮ ಶಿವಾಚಾರ್ಯರು ಶ್ರೀ ಮಹಾಂತೇಶ್ವರ ಮಠ ಚಿಣಮಗೇರಾ ಹಾಗೂ ಪೂಜ್ಯ ಭಂತೇ ವರಜ್ಯೋತಿ ಥೇರೋ ಅಣದುರ ಬುದ್ಧ ವಿಹಾರ, ಬೀದರ ಇವರು ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ, ಜೀವನೋಪಾಯ ಸಚಿವರು ಹಾಗೂ ರಾಯಚೂರ ಜಿಲ್ಲಾ ಉಸ್ತುವಾರಿ ಸಚಿವರು,ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರ,ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ,ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ ಸಿಂಗ್,ಶಾಸಕಿ ಖನಿಜ್ ಫಾತೀಮಾ,ಯೋಜನಾ ಆಯೋಗದ ಉಪಾಧ್ಯಕ್ಷ ಬಿ. ಆರ್. ಪಾಟೀಲ,ಸಂಸದ ರಾಧಾಕೃಷ್ಣ ದೊಡ್ಡಮನಿ,ಶಾಸಕ ಅಲ್ಲಮಪ್ರಭು ಪಾಟೀಲ,ಬಾಬುರಾವ ಚಿಂಚನಸೂರ, ಅಧ್ಯಕ್ಷರು, ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ನಿಗಮ ನಿ., ಬೆಂಗಳೂರು,ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಬಿ. ಪಾಟೀಲ,ಜಗದೇವ ಗುತ್ತೇದಾರ,ತಿಪ್ಪಣ್ಣಪ್ಪ ಕಮಕನೂರ, ಯಲ್ಲಪ್ಪ ನೈಕೋಡಿ ಪೂಜ್ಯ ಮಹಾ ಪೌರರು, ಮಹಾನಗರ ಪಾಲಿಕೆ, ಕಲಬುರಗಿ,ಎಸ್. ಕೆ. ಕಾಂತಾ ಮಾಜಿ ಸಚಿವರು, ಮಾಲೀಕಯ್ಯಾ ವಿ. ಗುತ್ತೇದಾರ,ಮಾಜಿ ಸಚಿವರು, ರೇವುನಾಯಕ ಬೆಳಮಗಿ ಮಾಜಿ ಸಚಿವರು, ಶರಣಪ್ಪ ಮಟ್ಟೂರ ಮಾಜಿ ಶಾಸಕರು, ಸೈಯದ್ ಮಹಮ್ಮದ್ ಅಲಿ ಅಲ್ ಹುಸೇನಿ ಅಧ್ಯಕ್ಷರು, ಕರ್ನಾಟಕ ರಾಜ್ಯ ವಕ್ಸ್ ಮಂಡಳಿ, ಬೆಂಗಳೂರು, ಮಜಹರ್ ಅಲಂ ಖಾನ್, ಅಧ್ಯಕ್ಷರು, ಕಲಬುರಗಿ ನಗರಾಭಿವೃದ್ಧಿ ಪ್ರಾಧೀಕಾರ, ಕಲಬುರಗಿ, ದೇವೆಂದ್ರಪ್ಪ ಮರ್ತೂರು , ಅಧ್ಯಕ್ಷರು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿ, ಬೆಂಗಳೂರು,ಚಂದ್ರಿಕಾ ಪರಮೇಶ್ವರ,ಅಧ್ಯಕ್ಷರು, ಜಿಲ್ಲಾ ಸರಕಾರಿ ಪಂಚ ಗ್ಯಾರಂಟಿ ಸಮಿತಿ, ಕಲಬುರಗಿ, ಸುಹಾಸಿನಿ ವಿರೇಶ ಖೇಳಗಿ,ಅಧ್ಯಕ್ಷರು, ಪರಸಭೆ, ಅಫಜಲಪೂರ,ಪ್ರಕಾಶ ಜಮಾದಾರ ಅಧ್ಯಕ್ಷರು,ಸರ್ಕಾರಿ ಪಂಚ ಗ್ಯಾರಂಟಿ ಯೋಜನಾ ಸಮಿತಿ, ಅಫಜಲಪೂರ

ಡಾ. ಡಿ.ಜಿ.ಸಾಗರ ರಾಜ್ಯ ಸಂಚಾಲಕರು,ಕನಾರ್ಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಬೆಂಗಳೂರು,ಡಾ. ವಿಠಲ ದೊಡ್ಡಮನಿ,ಗೌರವಾಧ್ಯಕ್ಷರು, ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಜಂಯಂತ್ಯೋತ್ಸವ ಸಮಿತಿ, ಕಲಬುರಗಿ,ಸೋಮಶೇಖರ ಗೋನಾಯಕ್,ಅಧ್ಯಕ್ಷರು, ಡಿ.ಸಿ.ಸಿ ಬ್ಯಾಂಕ್, ಕಲಬುರಗಿ,ಪ್ರಭುಗೌಡ ಪಾಟೀಲ

ಅಧ್ಯಕ್ಷರು, ಪಿ.ಎಲ್.ಡಿ.ಬ್ಯಾಂಕ್, ಅಫಜಲಪೂರ, ಉರ್ಮಿಳಾ ಪ್ರಭುಲಿಂಗ ದೇವತಕಲ ಅಧ್ಯಕ್ಷರು, ಗ್ರಾಮ ಪಂಚಾಯತ ಗೊಬ್ಬುರ (ಬಿ)ವಾಸು ವಂಟಿ,ಅಧ್ಯಕ್ಷರು, ಅರುಣಕುಮಾರ ಪಾಟೀಲ ಮಾಜಿ ಜಿ. ಪಂ. ಸದಸ್ಯರು, ಗೊಬ್ಬುರ (ಬಿ) ಉಪಸ್ಥಿತಿ ಇದ್ದರು.ಕಾರ್ಯಕ್ರಮಕ್ಕೆ ಗೊಬ್ಬುರು (ಬಿ) ಗ್ರಾಮದ ಕೇವಲ ಅಫಜಲಪೂರ ತಾಲೂಕಿನ ಮಹಾಜನತೆಯಷ್ಟೇ ಅಲ್ಲದೆ ಇಡೀ ಕಲಬುರಗಿ ಜಿಲ್ಲೆಯ ಹಾಗೂ ನಾಡಿನ ರಾಜಕೀಯ ಹಿರಿಯ ಕಿರಿಯ ಧುರೀಣರು, ಸೇರಿದಂದಂತೆ ಸಮಾರಂಭದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದ್ದರು.

# ನೀರಿನಂತೆ : ಮುಖ್ಯಮಂತ್ರಿ ಸಿದ್ದರಾಮಯ್ಯ

ಸಂಘಟನೆ ಹಾಗೂ ಹೋರಾಟ ಎಂಬ ಮೂರು ಮಂತ್ರಗಳನ್ನು ಬಿಟ್ಟು ಹೋಗಿದ್ದಾರೆ. ಅಕ್ಷರ ಸಂಸ್ಕೃತಿಯಿಂದ ವಂಚಿತರಾದವರು ಶಿಕ್ಷಣವನ್ನು ಪಡೆದುಕೊಳ್ಳಲೇಬೇಕು. ಆಗ ಮಾತ್ರ ಸ್ವಾಭಿಮಾನ, ಜ್ಞಾನ ಬರಲು, ಸಂಘಟಿತರಾಗಲು ಸಾಧ್ಯವಾಗುತ್ತದೆ. ಅಂಬೇಡ್ಕರ್ ಅವರು ಅಂದಿನ ಕಾಲದಲ್ಲಿಯೇ ಎಷೆ??? ಕಷ್ಟವಾದರೂ, ಮಾನಸಿಕ ತೊಂದರೆಯಾದರೂ ಶಿಕ್ಷಣವನ್ನು ಬಿಡಲಿಲ್ಲ. ಅಂಬೇಡ್ಕರ್ ಅವರೊಬ್ಬ ದೂರದೃಷ್ಟಿಯಿದ್ದ ನಾಯಕರು. ಅಂಥವರಿಗೆ ಮಾತ್ರ ನೂರು ವರ್ಷಗಳಲ್ಲಿ ಸಮಾಜದಲ್ಲಿ ಏನಾಗಬಹುದು ಎಂದು ಊಹಿಸಲು ಸಾಧ್ಯವಾಗುತ್ತದೆ ಎಂದರು.

ಎಸ್.ಆರ್.ವಿಶ್ವನಾಥ್ ಅವರು ಯಲಹಂಕದಲ್ಲಿ ಪಕ್ಷಾತೀತವಾಗಿ ಕೆಲಸ ಮಾಡುವುದಾಗಿ ಹೇಳಿರುವುದನ್ನು ಸ್ವಾಗತಿಸಿದ ಮುಖ್ಯಮಂತ್ರಿಗಳು, ಯಲಹಂಕದಲ್ಲಿ ದಲಿತರು ಹಿಂದುಳಿದವರೇ ಹೆಚ್ಚಿದ್ದು, ಎಲ್ಲರಿಗೂ ನ್ಯಾಯ ದೊರಕಿಸುವ ಕೆಲಸವನ್ನು ವಿಶ್ವನಾಥ್ ಮಾಡುತ್ತಿದ್ದಾರೆ. ವಿಶ್ವನಾಥ್ ಅವರ ಕ್ಷೇತ್ರಕ್ಕೆ ಅನುದಾನದ ಬೇಡಿಕೆಯನ್ನು ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಅಂಬೇಡ್ಕರ್ ಅವರ ವಿಚಾರಗಳು ಇನ್ನಷ್ಟು ಪಸರಿಸಲಿ:

ಸಮಗ್ರ ಸಾಮಾಜಿಕ ವ್ಯವಸ್ಥೆ ಬದಲಾಗಬೇಕು. ಅಂಬೇಡ್ಕರ್ ದಲಿತರಾಗಿ ಹುಟ್ಟಿದರೂ ಎಲ್ಲರ ನಾಯಕರಾಗಿದ್ದರು. ಸಾಮಾಜಿಕ ನ್ಯಾಯದಿಂದ ವಂಚಿತರಾದವರೆಲ್ಲರ ನಾಯಕರಾಗಿದ್ದರು. ಈ ದೇಶದಲ್ಲಿ ಅವರು ಹುಟ್ಟಿರವುದೇ ನಮಗೆ ಹೆಮ್ಮೆಯ ಸಂಗತಿ ಎಂದರು. ಅಂಬೇಡ್ಕರ್ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ ಪ್ರತಿಮೆಗಳು ಸಂಕೇತಗಳಾದರೂ, ಇವುಗಳಿಂದ ಅಂಬೇಡ್ಕರ್ ಅವರ ವಿಚಾರಗಳು ಇನ್ನಷ್ಟು ಪಸರಿಸಲಿ ಎಂದರು

# ಯಾರಿಗೂ ನೆಮ್ಮದಿಯಿಲ್ಲ : ಬಿ.ವೈ.ವಿಜಯೇಂದ್ರ

ಮಧ್ಯರಾತ್ರಿ 12 ಗಂಟೆಯವರೆಗೆ ಕೆಪಿಎಸ್‌ಸಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಿ ಮಧ್ಯರಾತ್ರಿ ಹಾಲ್ ಟಿಕೆಟ್ ಪಡೆದು, ಮರುದಿನ ಬೆಳಗ್ಗೆಯೇ ಪರೀಕ್ಷಾ ಕೇಂದ್ರಕ್ಕೆ ಹೋಗಿ ಪರೀಕ್ಷೆ ಬರೆಯುವಂತೆ ಮಾಡಿರುವ ಗೊಂದಲದ ವ್ಯವಸ್ಥೆಯಿಂದ ಹಿಂಸೆ ಅನುಭವಿಸುತ್ತಿರುವ ಪರೀಕ್ಷಾರ್ಥಿಗಳು ಹಾಗೂ ಅವರ ಕುಟುಂಬದವರ ಶಾಪ ರಾಜ್ಯ ಸರ್ಕಾರಕ್ಕೆ ತಟ್ಟದೇ ಬಿಡದು ಎಂದು ಅವರು ಆಕ್ರೋ?ಶ ವ್ಯಕ್ತಪಡಿಸಿದ್ದಾರೆ.

ವಿಧಾನಸಭಾ ಅಧಿವೇಶನದಲ್ಲಿ ಕನ್ನಡ ಮಾಧ್ಯಮ ಅಭ್ಯರ್ಥಿಗಳ ಹಿತಾಸಕ್ತಿ ಕಾಪಾಡುವುದಾಗಿ ಸ್ವತಃ ಮುಖ್ಯಮಂತ್ರಿಗಳೇ ಮಾತು ಕೊಟ್ಟು, ಪರೀಕ್ಷಾರ್ಥಿಗಳಿಗೆ ನ್ಯಾಯ ಒದಗಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದಾರೆ.

# ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಿ: ಡಾ. ಬಿದರಿ



ಕಲಬುರಗಿ:ಮೇ.3:ಜೀವನದಲ್ಲಿ ಮುಂದು ಸಾಗಬೇಕಾದರೆ ನಮಗೆ ಪುಸ್ತಕ ಬಹಳ ಸಹಕಾರಿಯಾಗಿರುತವೆ, ವಿದ್ಯಾರ್ಥಿಗಳು ತಮ್ಮ ಕನಸನ್ನು ರೂಪಿಸಿಕೊಳ್ಳಲು ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಸಾಹಿತ್ಯ ಅಕಾಡಮಿ ಸದಸ್ಯರಾದ ಡಾ. ಚಂದ್ರಕಲಾ ಬಿದರಿ ಅವರು ಹೇಳಿದರು.

ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜಿನ ಕನ್ನಡ ವಿಭಾಗದವತಿಯಿಂದ ಹಮ್ಮಿಕೊಂಡ ಕನ್ನಡ ವ್ಯಾಕರಣ ಎಡ್ ಆನ್ ಕೋರ್ಸ್ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಮುಂದುವರೆದು ನಾನು ನನ್ನ ಜೀವನದಲ್ಲಿ ಕೇವಲ ಹೆಸರಿಗಾಗಿ ಕೆಲಸ ಮಾಡದೆ, ಶ್ರದ್ಧೆ ಮತ್ತು ಪರಿಶ್ರಮದಿಂದ ಕೆಲಸ ಮಾಡಿರುವೆ. ನನ್ನ ಕೆಲಸದ ಪ್ರತಿ ಇರುವ ಶ್ರದ್ಧೆ ಮತ್ತು ಪರಿಶ್ರಮ ನನಗೆ ಈ ನಾಡು ಗುರುತಿಸುವ ಹಾಗೆ ಮಾಡಿದೆ ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆರ್. ಬಿ. ಕೊಂಡಾ ಅವರು ವಹಿಸಿಕೊಂಡು ಮಾತನಾಡುತ್ತಾ ನಮ್ಮ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಅವರ ಪಠ್ಯ ಕ್ರಮದ ಜೊತೆಗೆ ಹೆಚ್ಚಿನ ಅನುಭವ ಮತ್ತು ಜ್ಞಾನ ದೊರೆಯಲೆಂದು ಈ ರೀತಿಯ ಕೋರ್ಸಗಳು ಹಮ್ಮಿಕೊಳ್ಳುತೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಕವಿತಾ ಅಶೋಕ್ ಅವರು ಸ್ವಾಗತ ಮತ್ತು ಅತಿಥಿ ಪರಿಚಯ ಮಾಡಿದರು. ಶ್ರೀಮತಿ ಬಸಮ್ಮ ಗೊಬ್ಬರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.ಕಾರ್ಯಕ್ರಮದಲ್ಲಿ ಶ್ರೀಮತಿ ದಾನಮ್ಮ, ಶ್ರೀಮತಿ ಶಿವಲೀಲಾ ಧೋತ್ರೆ, ಡಾ. ಶ್ರೀದೇವಿ ಸರಡಗಿ, ಡಾ. ನಾಗರತ್ನ, ಶ್ರೀಮತಿ ಗೀತಾ ಪಾಟೀಲ್, ವಿವಿಧ ವಿಭಾಗಗಳ

## ನಿಧನ ವಾರ್ತೆ



ಕಲಬುರಗಿ:ಮೇ.3 ಇಂದು ಸಾಯಂಕಾಲ 6 ಗಂಟೆಗೆ ಶ್ರೀಯುತ ರೇವಣಸಿದ್ದಪ್ಪ ಎಂ ಮಣ್ಣೂರ್ ಅವರು ನಿಧನರಾಗಿದ್ದು ಅವರು ಸತ್ಯಕಾಮ ಪತ್ರಿಕೆಯ ಸಂಪಾದಕರ ದಿ. ಪಿ ಎಂ ಮಣ್ಣೂರ್ ಅವರ ಸೋದರರಾಗಿದ್ದು ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳ ಹೆಣ್ಣುಮಗಳಿದ್ದು ಅಪಾರ ಬಂದು ಮತ್ತು ಮಿತ್ರರನ್ನು ಬಿಟ್ಟು ಅಗಲಿದ್ದಾರೆ ಇವರ ಅಂತ್ಯಕ್ರಿಯೆ ನಾಳೆ 11:00 ಗಂಟೆಗೆ ಆಪ್ಜಲಪುರದ ದರ್ಗಾ ರೋಡ್ ರುದ್ರಭೂಮಿಯಲ್ಲಿಮಾಡಲಾಗುವುದು

# 200 ಕೋಟಿ ರೂ. ಮೊತ್ತದ ಮಾಸ್ಟರ್ ಪ್ಲ್ಯಾನ್ ಸಿದ್ಧಬಿ.ಫೌಜಿಯಾ ತರನ್ನುಮ್

ಸೌಲಭ್ಯಗಳು ಸೇರಿದಂತೆ ಒಟ್ಟಾರೆ ದೇವಸ್ಥಾನ ಮತ್ತು ಪಟ್ಟಣದ ಸೌಂದರ್ಯೀಕರಣ ಹೆಚ್ಚಿಸಲು ಮತ್ತು ಭಕ್ತಾದಿಗಳ ಅನುಕೂಲಕ್ಕೆ ತಕ್ಕಂತೆ ಮೂಲಸೌಕರ್ಯ ಕಲ್ಪಿಸುವುದು ಇದರ ಮೂಲ ಉದ್ದೇಶವಾಗಿದೆ ಎಂದರು.

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ "ಎ" ಅಡಿಯಲ್ಲಿ ಬರುವ ಶ್ರೀ ದತ್ತಾತ್ರೇಯನ ಸನ್ನಿದಿಯ ದರ್ಶನಕ್ಕೆ ದೇಶದ ನಾನಾ ಭಾಗಗಳಿಂದ ಅಪಾರ ಸಂಖ್ಯೆಯ ಭಕ್ತರು ಆಗಮಿಸುವುದರಿಂದ ಭಕ್ತರ ಅನುಕೂಲಕ್ಕೆ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್, ಸೂಚನಾ ಫಲಕಗಳು, ಶೂ ಸ್ಟ್ಯಾಂಡ್, ಸಿ.ಸಿ.ಟಿ.ವಿ., ಸಂಗಮ ಮತ್ತು ಅಷ್ಟ ತೀರ್ಥಗಳ ಅಭಿವೃದ್ಧಿ, ಡಸ್ಟ್ ಬಿನ್ ಅಳವಡಿಕೆ, ಪ್ರವಾಸಿ ಮಾಹಿತಿ ಕೇಂದ್ರ, ವಿವಿಧೋದ್ದೇಶ ಸಭಾಂಗಣ ನಿರ್ಮಾಣ ಹೀಗೆ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ "ಪ್ರಸಾದ" ಯೋಜನೆಯಡಿ ಸೇರ್ಪಡೆ ಮಾಡುವಂತೆ 83.52 ಕೋಟಿ ರೂ. ಮೊತ್ತದ ಪ್ರಸ್ತಾವನೆ ಈಗಾಗಲೆ ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ 2024ರ ಅಕ್ಟೋಬರ್ 29 ರಂದೇ ಸಲ್ಲಿಸಿದ್ದು, ಅನುಮೋದನೆಯ ನಿರೀಕ್ಷೆ ಹೊಂದಲಾಗಿದೆ ಎಂದರು.ಇನ್ನು ಈ ಕುರಿತಂತೆ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಕಲಬುರಗಿ ಸಂಸದ ರಾಧಾಕೃಷ್ಣ ದೊಡ್ಡಮನಿ ಅವರು ಈಗಾಗಲೆ 2-3 ಬಾರಿ ಬಾರಿ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವರನ್ನು ಕಂಡು ಗಾಣಗಾಪೂರ ಸಮಗ್ರ ಅಭಿವೃದ್ಧಿ ಕುರಿತಂತೆ ಮನವರಿಕೆ ಮಾಡಿ ಅನುದಾನ ಒದಗಿಸಲು ಕೋರಿರುತ್ತಾರೆ.ಕಳೆದ ವರ್ಷ ರುದ್ರಪ್ಪ ಲಮಾಣಿ ನೇತೃತ್ವದ ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯು ದೇವಸ್ಥಾನದ ಅಭಿವೃದ್ಧಿ ಕುರಿತಂತೆ ಸಮಿತಿಗೆ ಸಲ್ಲಿಕೆಯಾದ ಅರ್ಜಿ ಸಂಖ್ಯೆ:73/2024 ಕುರಿತಂತೆ ಪರಿಶೀಲಿಸಲು ದಿ.04-07-2024 ರಂದು ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಸಿದ ಸಭೆಯಲ್ಲಿ ದೇವಲ ಗಾಣಗಾಪೂರ ಮತ್ತು ಶ್ರೀ ದತ್ತಾತ್ರೇಯ ದೇವಸ್ಥಾನದ ಅಭಿವೃದ್ಧಿಗೆ ಸಿದ್ದಪಡಿಸಲಾದ ನೀಲಿ ನಕ್ಷೆಯೊಂದಿಗೆ ಅದರ ಜೀರ್ಣೋದ್ಧಾರಕ್ಕೆ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಸಮಿತಿಗೆ ಮನವರಿಕೆ ಮಾಡಿಕೊಟ್ಟಾಗ ಜಿಲ್ಲಾಡಳಿತ ಮುಂಜಾಗ್ರತಾ ಕೆಲಸಗಳಿಗೆ ಸಮಿತಿಯು ಪ್ರಶಂಶೆ ವ್ಯಕ್ತಪಡಿಸಿತ್ತು. ಸಭೆಯಲ್ಲಿ ಅಫಜಲಪೂರ ಕ್ಷೇತದ ಶಾಸಕರಾಗಿರುವ ಎಂ.ವೈ.ಪಾಟೀಲ ಸೇರಿದಂತೆ ಸಮಿತಿಯ ಅನೇಕ ಸದಸ್ಯರು ಮತ್ತು ಮುಜರಾಯಿ ಇಲಾಖೆಯ ಆಯುಕ್ತರು ಚರ್ಚೆಯಲ್ಲಿ ಭಾಗವಹಿಸಿದ್ದರು. ಅದೇ ದಿನ ಸಮಿತಿಯು ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ಮಾಡಿ, ಭಕ್ತರೊಂದಿಗೂ ಸಮಾಲೋಚನೆ ಮಾಡಿತ್ತು. ದೇವಸ್ಥಾನ ಅಭಿವೃದ್ಧಿಗೆ ಅನುದಾನ ಬಿಡುಗಡೆಗೆ ಸರ್ಕಾರ ಮಟ್ಟದಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಮತ್ತು ಅವಶ್ಯವಿದ್ದಲ್ಲಿ ಕೇಂದ್ರಕ್ಕೂ ಸಮಿತಿ ನಿಯೋಗ ತೆರಳಲಾಗುವುದು ಎಂದು ಸಮಿತಿ ಅಧ್ಯಕ್ಷರಾದ ರುದ್ರಪ್ಪ ಲಮಾಣಿ ಅವರು ತಿಳಿಸಿರುತ್ತಾರೆ.ಇತ್ತೀಚೆಗೆ ರಾಜ್ಯದ ಪ್ರಮುಖ 14 ದೇವಾಲಯಗಳ ಪ್ರಸಾದವನ್ನು ಆನ್‌ಲೈನ್ ಮೂಲಕ ಬುಕ್ ಮಾಡಿ ಪಡೆಯಲು "ಇ-ಪ್ರಸಾದ" ಸೇವೆ ಪ್ರಾರಂಭವಾಗಿದ್ದು, ಇದರಲ್ಲಿ ಗಾಣಗಾಪೂರದ ಶ್ರೀ ದತ್ತಾತ್ರೇಯನ ದೇವಸ್ಥಾನ ಒಳಗೊಂಡಿದೆ ಎಂದರು.ವಾಕ್ ವೇ ನಿರ್ಮಾಣ,ಕಿಂಡಿ ದೊಡ್ಡದಾಗಿ ನಿರ್ಮಾಣಕ್ಕೆ ಪ್ರಸ್ತಾವನೆ:ದೇವಸ್ಥಾನದ ನಿಧಿಯಿಂದ 1 ಕೋಟಿ ರೂ. ವೆಚ್ಚದಲ್ಲಿ ವಾಕ್ ವೇ ಕೆಲಸ ಪ್ರಗತಿಯಲ್ಲಿದೆ. ಶ್ರೀ ದತ್ತಾತ್ರೇಯ ದೇವಸ್ಥಾನ, ಶ್ರೀ ಸಂಗಮ, ಶ್ರೀ ಕಲ್ಲೇಶ್ವರ ದೇವಸ್ಥಾನ ಹಾಗೂ ಅಷ್ಟ ತೀರ್ಥಗಳಿಗೆ ತೆರಳುವ ಭಕ್ತಾದಿಗಳ ನೆರವಿಗಾಗಿ ವಿವಿಧ ಬ್ಯಾನರ್ ಮತ್ತು ಕಬ್ಬಿಣದ ಬೋರ್ಡ್ ತಯಾರಿಸಿ ನಾಮ ಫಲಕಗಳನ್ನು ಅಳವಡಿಸಲಾಗಿದೆ. ಶ್ರೀ ದತ್ತಾತ್ರೇಯನ ದರ್ಶನ ಕಿಂಡಿಯು ತುಂಬಾ ಕಿರಿದಾಗಿದ್ದು, ಇದನ್ನು ದೊಡ್ಡದಾಗಿ ನಿರ್ಮಿಸುವ ಕುರಿತಂತೆ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಿಗೆ ಜಿಲ್ಲಾಡಳಿತದಿಂದ ಪ್ರಸ್ತಾವನೆ ಸಲ್ಲಿಸಿದೆ ಎಂದು ಬಿ.ಫೌಜಿಯಾ ತರನ್ನುಮ್ ತಿಳಿಸಿದರು.ಕಲಬುರಗಿ ಜಿಲ್ಲೆಯ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 1,630 ದೇವಾಲಯಗಳ ಪೈಕಿ 1,324 ದೇವಸ್ಥಾನಗಳ ಸರ್ವೆ ದಾಖಲೆಗಳನ್ನು ತಯಾರಿಸಲಾಗಿರುತ್ತದೆ. ಘತ್ತರಗಾ ಶ್ರೀ ಭಾಗ್ಯವಂತಿ ದೇವಿ ದೇವಸ್ಥಾನದ ಅಭಿವೃದ್ಧಿಗೂ ಡಿ.ಪಿ.ಆರ್ ತಯಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದ ಜಿಲ್ಲಾಧಿಕಾರಿಗಳು, ಶ್ರೀ ದತ್ತಾತ್ರೇಯ ದೇವಸ್ಥಾನದ ಸಮಗ್ರ ಅಭಿವೃದ್ಧಿ, ಸ್ವಚ್ಛತೆ ಹಾಗೂ ದೇವಸ್ಥಾನಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಹಲವಾರು ಕಾರ್ಯಕ್ರಮವನ್ನು ರೂಪಿಸಿದ್ದು, ಭಕ್ತಗಣ ಸಹ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನದಲ್ಲಿ ಸುಕ್ಷೇತ್ರದಲ್ಲಿ ಇನ್ನು ಹೆಚ್ಚಿನ ಮೂಲಸೌಕರ್ಯಗಳನ್ನು ಸರ್ಕಾರ ಒದಗಿಸಲಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

# ಸರ್ಕಾರಿ ಶಾಲೆಯ ವಿದ್ಯಾರ್ಥಿ ಮಲ್ಲಿಕಾರ್ಜುನ್ ಹೊಸಮನಿ ಅವರ ಅದ್ಭುತ ಸಾಧನೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಮೇ.3: ಕುಕನೂರು ತಾಲೂಕಿನ ಆಡೂರ ಗ್ರಾಮದ ಮಲ್ಲಿಕಾರ್ಜುನ್‌ದೇವಪ್ಪಹೊಸಮನಿ ಎಂಬ ವಿದ್ಯಾರ್ಥಿಯು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮ ಸ್ಥಾನ ಪಡೆಯುವುದರ ಮೂಲಕ ಕನ್ನಡ-125, ಇಂಗ್ಲಿಷ್ - 98, ಹಿಂದಿ- 100, ಗಣಿತ- 97, ವಿಜ್ಞಾನ-97, ಸಮಾಜ ವಿಜ್ಞಾನ- 98, ಅಂಕಗಳನ್ನು ಪಡೆಯುವುದರ ಮೂಲಕ ಸರಕಾರಿ ಪ್ರೌಢಶಾಲೆ ರಾಜೂರ ಆಡೂರಿನ ಕೀರ್ತಿ ಪತಾಕೆಯನ್ನು ಆರಿಸಿದ್ದಾನೆ. ಎಸ್ ಎಸ್ ಎಲ್ ಸಿ ಯಲ್ಲಿ 98.4% ಪ್ರತೀಶತ ಅಂಕ ಪಡೆದು ತಾನು ಕಲಿಯುತ್ತಿರುವ ಸರಕಾರಿ ಪ್ರೌಢಶಾಲೆ ರಾಜೂರ ಆಡೂರಿನ ಶಾಲೆಯ ಕೀರ್ತಿ ಯನ್ನು ಎತ್ತಿ ಹಿಡಿದಿದ್ದಾನೆ.

ತಂದೆ ತಾಯಿಯೇ ಮನೆಯೇ ಮೊದಲ ಪಾಠಶಾಲೆ ಎಂಬುವಂತೆ ಮನೆಯಲ್ಲಿ ತಂದೆ ತಾಯಿ ಇಬ್ಬರು ಮಗನಿಗೆ ಒಳ್ಳೆಯ ಸಂಸ್ಕಾರ



ಒಳ್ಳೆ ಶಿಕ್ಷಣವನ್ನು ಕಲಿಸಿರುತ್ತಾರೆ.

ನಾನು ಟ್ಯೂಷನ್‌ಗೆ ಹೋಗದೆ ಮನೆಯಲ್ಲೆ? ಕುಳಿತು ಓದುತ್ತಿದ್ದೆ. ಓದುವುದಕ್ಕಾಗಿಯೇ ಸಮಯ ನಿಗದಿಪಡಿಸಿಕೊಂಡಿರಲಿಲ್ಲ. ಆಸಕ್ತಿ ಮೂಡಿದಾಗ ಆಸಕ್ತಿಯಿಂದ ಓದುತ್ತಿದ್ದೆ. ಆನಂತರ ಓದಿದ ವಿಷಯಗಳನ್ನು ಚೆನ್ನಾಗಿ ಪುನರ್ಮನನ ಮಾಡಿಕೊಳ್ಳುತ್ತಿದ್ದೆ. ಇದರಿಂದ ಹೆಚ್ಚಿನ ಅಂಕ ಗಳಿಸಲು ಸಾಧ್ಯವಾಯಿತು".ಎಂದು ವಿದ್ಯಾರ್ಥಿ ಪತ್ರಿಕಾ ಪ್ರತಿನಿಧಿಯೊಂದಿಗೆ ತನ್ನ ಅನಿಸಿಕೆಯನ್ನು ಹಂಚಿಕೊಂಡಿದ್ದಾನೆ. ಭವಿಷ್ಯದಲ್ಲಿ ಏಂಖ, ಐಎಎಸ್, ಡಾಕ್ಟರ್ ಆಗಬೇಕೆಂದು ಕನಸಿದೆ ಎಂದು ವಿದ್ಯಾರ್ಥಿ ತಿಳಿಸಿದ್ದಾರೆ

ವಿದ್ಯಾರ್ಥಿಯ ಸಾಧನೆಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ ಈ ಸಾಧನೆಗೆ ಆಡೂರು ರಾಜೂರ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ಹಾಗೂ ಎಸ್ ಡಿ ಎಂ ಸಿ ಅಧ್ಯಕ್ಷರು ಸರ್ವ ಸದಸ್ಯರು ಸ್ನೇಹಿತರು ಹಾಗೂ ಪೋಷಕರು ಹರ್ಷವನ್ನು ವ್ಯಕ್ತಪಡಿಸಿ ಅಭಿನಂದನೆಯನ್ನು ತಿಳಿಸಿದ್ದಾರೆ.

# ಮೇ. 4 ರವರೆಗೆ ನೀಟ್ ಪರೀಕ್ಷೆ: ನಿಷೇದಾಜ್ಞೆ ಜಾರಿಗೊಳಿಸಿ ಸಹಾಯಕ ಆಯುಕ್ತರು ಆದೇಶ

ಮಲ್ಲಮ್ಮ ನುಡಿ ವಾರ್ತೆ

ಬೀದರ:ಮೇ.3: ನ್ಯಾಷನಲ್ ಟೇಸ್ಟಿಂಗ್ ಏಜೇನ್ಸಿ ಅವರು ಮೇ.4 ರವರೆಗೆ ನಡೆಸಲಿರುವ ನೀಟ್-2025ರ ಪರೀಕ್ಷೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ದೋಷರಹಿತವಾಗಿ ನಡೆಸಲು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ-2023ರ ಕಲಂ 163 (1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೀದರ ಜಿಲ್ಲೆಯ ಒಟ್ಟು 24 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟ-ರ್ ವ್ಯಾಪ್ತಿಯ ಪ್ರದೇಶದಲ್ಲಿ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಬೀದರ ಉಪ ವಿಭಾಗದ ದಂಡಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರಾದ ಮೊಹಮ್ಮದ್ ಶಕೀಲ್ ಅವರು ಆದೇಶಿಸಿರುತ್ತಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಝಿರಾಕ್ಸ್, ಟೈಪಿಮಗ್ ಟ್ರೇನಿಮಗ್ ಸೆಂಟರ್ ಹಾಗೂ ಕಂಪ್ಯೂಟರ್ ಅಂಗಡಿಗಳು ಬಂದ ಮಾಡಬೇಕು.

# ಅಗ್ರಶ್ರೇಣಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಮೇ.3:ಡಾ. ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆ ಕಮಲನಗರ ಮಾರ್ಚ-2025ರ ಎಸ್. ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಅಗ್ರಶ್ರೇಣಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಶನಿವಾರ ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ತಹಸಿಲ್ದಾರರಾದ ಅಮಿತಕುಮಾರ ಕುಲಕರ್ಣಿಯವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳು ಕೆಟ್ಟ ಚಟಗಳಿಂದ ದೂರವಿರಲು ಕರೆ ನೀಡಿದರು. ಡಾ॥ ಚನ್ನಬಸವ ಪಟ್ಟದ್ದೇವರ ಪ್ರೌಢ ಶಾಲೆ ಗಡಿ ಭಾಗದಲ್ಲಿ ಮಾದರಿ ಕಾರ್ಯ ಮಾಡುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯುವ ಮುಖಂಡರಾದ ಶ್ರೀ ಪ್ರಕಾಶ ಟೊಣ್ಣೆ ವಹಿಸಿ, ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಮಕ್ಕಳು ಅಧ್ಯಯನದ ಚಟ ಬೆಳೆಸಿಕೊಳ್ಳುವದರಿಂದ ಮಕ್ಕಳ ಆಲೋಚನೆ ಸುಂದರವಾಗಿ ಬೆಳೆಯುತ್ತದೆ. ಒಳ್ಳೆ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.

ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಯುತ ಮಾಣಿಕರಾವ ಪಾಟೀಲ ಬಸವ ಪೂಜೆ ನೆರವೆರಿಸಿದರು ಶ್ರೀಯುತ ಅಮರೆಪ್ಪಾ ಹಿರೇಮಠ ಸಿ.ಪಿ.ಐ ಕಮಲನಗರ,ಎಸ್.ಎಸ್.ಮೈನಾಳೆ ನಿವೃತ್ತ ಪ್ರಾಂಶುಪಾಲರು ಈ ಶಾಲೆ 27 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ಮತ್ತು ಪ್ರಣವ ಪಾಟೀಲ ರಾಜ್ಯಕ್ಕೆ 7ನೇ ಸ್ಥಾನ ಪಡೆದು ಈ ಭಾಗದ ಕಿರ್ತಿ ಪತಾಕೆ ಹೆಚಿಸಿರುತ್ತಾನೆ ಎಂದು ಹೇಳಿದರು. ಹಾಗೂ ಶ್ರೀ ಬಸವರಾಜ ಮೋಳಕೀರೆ ಪ್ರಾಚಾರ್ಯರು ಮುಖ್ಯ ಅತೀಥಿ ಸ್ಥಾನ ಅಲಂಕರಿಸಿ ಮಾತನಾಡಿ ಪರಮ ಪೂಜ್ಯರು ಗುಣಮಟ್ಟದ ಶಾಲೆ ಸ್ಥಾಪಿಸಿರುವ ಪ್ರಯುಕ್ತ ಅನೇಕ ವಿದ್ಯಾರ್ಥಿಗಳು ಪ್ರತಿ ವರ್ಷ ಸ್ಪರ್ಧಾತ್ಮಕ ಪರೀಕ್ಷೆ ತೆರಗಡೆಯಾಗಿ ಅನೇಕ ಉನ್ನತ ಸ್ಥಾನ ಅಲಂಕರಿರುತ್ತಾರೆ ಎಂದು ತಿಳಿಸಿದರು.

ಶ್ರೀ ಚನ್ನಬಸವ ಘಾಳೆ ಪ್ರಾಸ್ತಾವಿಕ ಮಾತನಾಡಿ ಪೂಜ್ಯರ ಸಂಸ್ಕಾರಯುತ ಶಾಲೆಯಲ್ಲಿ ಅಧ್ಯಯನಗೈದ ವಿದ್ಯಾರ್ಥಿ ಮುಂದಿನ ಸಂಸ್ಕಾರಯುತ ಕಾಲೇಜಿನಲ್ಲಿ ದಾಖಲಾತಿ ಪಡೆಯಲು ಸಲಹೆ ನೀಡಿದರು

ಭರತ ನಂದನವರೆ ಸ್ವಾಗತಿಸಿದರು ಹಾವಗಿರಾವ ಮಠಪತಿ ನಿರೂಪಿಸಿದರು .

# ಹೊಲದಲ್ಲಿ ಜಿಂಕೆ ಸಾವು, ಅರಣ್ಯ ಅಧಿಕಾರಿಗಳಿಗೆ ಹಸ್ತಾಂತರ

ಮಲ್ಲಮ್ಮ ನುಡಿ ವಾರ್ತೆ


ಕಮಲನಗರ:ಮೇ.3:ತಾಲೂಕಿನ ರಾಂಪುರ ಶಿವಾರಿನಲ್ಲಿ ಇರುವ ಶಿವರಾಜ ರಾಂಪುರೆ ಅವರ ಹೊಲದಲ್ಲಿ ಶನಿವಾರ ಮುಂಜಾನೆ ಜಿಂಕೆ ಒಂದು ಸತ್ತು ಬಿದ್ದಿರುವುದನ್ನು ಕಂಡು ಕಮಲನಗರ ವಲಯ ಅರಣ್ಯ ಅಧಿಕಾರಿಗೆಗಳಿಗೆ ಮಾಹಿತಿ ನೀಡಿ ಜಿಂಕೆ ಶವ ಹಸ್ತಾಂತರ ಮಾಡಿದರು.



ಮಾಹಿತಿ ತಿಳಿದ ಕೂಡಲ ಸ್ಥಳಕ್ಕೆ ಧಾವಿಸಿದ ಉಪ ವಲಯ ಅರಣ್ಯ ಅಧಿಕಾರ ಸುಧಾಕರ ಬಿರಾದಾರ ಮತ್ತು ಸಿಬ್ಬಂದಿ ಮೆಹಬೂಬ್ ಬೆಳಕೋಣಿ ಜಿಂ-ಕೆಯ ಪಾರ್ಥಿವ ಶರಿವನ್ನು ತೆಗೆದುಕೊಂಡು ಹೋಗಿ, ಕಮಲನಗರ ಪಶು ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ಕಳಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿ, ತಾಲೂಕಿನ ಯಾವದೇ ಪ್ರದೇಶದಲ್ಲಿ ವನ್ಯ ಜೀವಿಗಳ ರಕ್ಷಣೆಗೆ ನಾವು ಸದಾ ಸಿದ್ದರಾಗಿರುತ್ತೇವೆ, ಸಾರ್ವಜನಿಕ ಪ್ರಾಣಿ ರಕ್ಷಣೆ ಯಲ್ಲಿ ನಮ್ಮನ್ನು ಸಹಕರಿಸಿ ಮಾಹಿತಿ ನೀಡಲು ತಿಳಿಸಿದ್ದರು.

# ನ್ಯಾಯವಾದಿಗಳ ಹಿತರಕ್ಷಣೆಗೆ ಬದ್ಧ: ಪಸಾರ್ ವಾಗ್ದಾನ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಮೇ.3:ಎಂಥದ್ದೇ ಪರಿಸ್ಥಿತಿ ಎದುರಾದರೂ ನ್ಯಾಯವಾದಿಗಳ ಹಿತರಕ್ಷಣೆಗಾಗಿ ಪ್ರಾಮಾಣಿಕವಾಗಿ ದುಡಿಯುವುದಾಗಿ ಗುಲ್ಬರ್ಗ ಬಾರ್ ಅಸೋಸಿಯೇಷನ್ ನೂತನ ಅಧ್ಯಕ್ಷ ಎಸ್.ವಿ.ಪಸಾರ್ ವಾಗ್ದಾನ ಮಾಡಿದರು.

ಹೊಸದಾಗಿ ಅಧ್ಯಕ್ಷರಾಗಿ ಆಯ್ಕೆಗೊಂಡ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಏರ್ಪಡಿಸಿದ್ದ ಔತಣಕೂಟದ ಬೆನ್ನಲ್ಲೇ ಇಂದು ಬೆಳಗ್ಗೆ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಅವರು ಮಾತನಾಡಿದರು. ನ್ಯಾಯವಾದಿಗಳಿಗೆ ರಕ್ಷಣೆ ಇದ್ದಾಗ ಮಾತ್ರ ಪೂರಕ ವಾತಾವರಣದಲ್ಲಿ ಕಕ್ಷಿದಾರರ ಹಿತ ಕಾಪಾಡುವುದು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯವಾದಿಗಳಿಗೆ ಪೂರಕ ವಾತಾವರಣ ರೂಪಿಸುವ ನಿಟ್ಟಿನಲ್ಲಿ ತಾವು ಶ್ರಮಿಸುವುದಾಗಿ ಹೇಳಿದರು.

ಆರಂಭದಲ್ಲಿ ಅಸೋಷಿಯೇಷನ್ ನಿಕಟಪೂರ್ವ ಅಧ್ಯಕ್ಷ ಗುಪ್ತಲಿಂಗ ಎಸ್.ಪಾಟೀಲ್ ಅಧಿಕಾರ ಹಸ್ತಾಂತರಿಸಿದರು. ನೂತನ ಉಪಾಧ್ಯಕ್ಷ (ಸಾಮಾನ್ಯ) ಭೀಮಾಶಂಕರ ಎಲ್.ಪೂಜಾರಿ, ನೂತನ ಉಪಾಧ್ಯಕ್ಷೆ ಆರತಿ ಎಂ.ರಾಠೋಡ್, ಪ್ರಧಾನ ಕಾರ್ಯದರ್ಶಿ ಸಿದ್ದರಾಮ ಬಸವರಾಜ ವಾಡಿ, ಜಂಟಿ ಕಾರ್ಯದರ್ಶಿ ಸುಧೀರ್ ಗಾದಗೆ ಹಾಗೂ ಖಜಾಂಚಿ ಮಂಜುನಾಥ ಗುರಪ್ಪ ಪಾಟೀಲ್, ನ್ಯಾಯವಾದಿಗಳಾದ ಧರ್ಮಣ್ಣ ಎಸ್.ಜೈನಾಪುರ, ಜಯಶೀಲಾ ಜಿ.ಬೋಡಲೆ, ಬಸವಲಿಂಗ ಎಸ್.ನಾಸಿ, ಎಸ್.ಕೆ.ಚಿಕ್ಕಳ್ಳಿ, ಶಿವರಾಜ ಸಿ.ಪಾಟೀಲ್, ಬಿ.ಬಿ.ಪಾಟೀಲ್, ಸಂಜೀವಕುಮಾರ್ ಎಸ್.ಡೊಂಗರಗಾಂವ್, ನಾಗೇಶ್ ಮಲಕಪ್ಪ ಕೊಳ್ಳಿ, ಸಿದ್ದಪ್ಪ ಚಂದ್ರಶಾ ಪೂಜಾರಿ, ಶಿವಕುಮಾರ ವಿ.ಯಾದವ್, ಧೂಳಪ್ಪ ಭೀಮಶಾ, ಯಶವಂತ ಮಲ್ಲಿಕಾರ್ಜುನ ಹೌದೆ, ರಹೀಂಖಾನ್ ಪಠಾಣ ಹಾಗೂ ಫಯಾಜ್ ಮೆಹಮೂದ್ ಸೇರಿದಂತೆ ಇತರರಿದ್ದರು.

### ಬಸವ ಜಯಂತಿ; ರೇಣುಕಾವೀರ ಗಂಗಾಧರ ಶಿವಾಚಾರ್ಯರ ಅಭಿಮತ

# ಮನುಕುಲಕ್ಕೆ ಸಮಾನತೆ ಸಂದೇಶ ಸಾರಿದ ಬಸವಣ್ಣ





ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : 12 ನೇ ಶತಮಾನದಲ್ಲಿ ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಸೇರಿದಂತೆ ಹಲವು ಪದ್ಧತಿಗಳು ಆಚರಣೆಯಲ್ಲಿದ್ದ ಕಾಲದಲ್ಲಿ ವಚನಗಳ ಮೂಲಕ ಸಮಾಜ ಸುಧಾರಣೆಗೆ ಮುಂದಾದ ಬಸವಣ್ಣನವರ ತತ್ವ, ಆದರ್ಶಗಳು, ಚಿಂತನೆಗಳು ಎಲ್ಲರ ಬದುಕಿದೆ ದೀಪವಾಗಿವೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ರೇಣುಕವೀರ ಗಂಗಾಧರ ಶಿವಾಚಾರ್ಯ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವ ಉತ್ಸವ ಸಮಿತಿ ವತಿಯಿಂದ ಶುಕ್ರವಾರ ನಡೆದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ 892ನೇ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಮೇಲು ಕೀಲು, ಲಿಂಗ ಅಸಮಾನತೆ ಜಾತಿ ವ್ಯವಸ್ಥೆ ಹೋಗಲಾಡಿಸಿ ಹಲವಾರು ಸಾಮಾಜಿಕ ಸುಧಾರಣೆಗಳನ್ನು ತಂದವರು ಬಸವಣ್ಣನವರು. ದಯವೇ ಧರ್ಮದ ಮೂಲವಯ್ಯ ಎನ್ನುತ್ತಾ ಮನುಕುಲಕ್ಕೆ ಮಾನವೀಯತೆಯ ಸಂದೇಶವನ್ನು ಸಾರಿದರು. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಅನುಭವ ಮಂಟಪವನ್ನು ಹುಟ್ಟು ಹಾಕುವ ಮೂಲಕ ಕಾಯಕ ಸಿದ್ಧಾಂತದ ಅರಿವು ಮೂಡಿಸಿದರು ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಅಧ್ಯಕ್ಷ ಬಸವಕುಮಾರ ಪಾಟೀಲ್ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ರಚಿಸಿರುವ ಅನೇಕ ವಚನಗಳು ಮನುಕುಲದ ಏಳ್ಗೆಗೆ ನೆರವಾಗಿದ್ದು, ಅವರ ತತ್ವದರ್ಶಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ವಚನ ಸಾಹಿತ್ಯ ವಿಶ್ವದ ಮೊತ್ತಮೊದಲ ಬಂಡಾಯ ಸಾಹಿತ್ಯವಾಗಿದ್ದು, ನವ್ಯ ಕಾವ್ಯ ಪ್ರಕಾರವನ್ನೂ ಅದು ಒಳಗೊಂಡಿದೆ. ಹೀಗಾಗಿ ಇಂದಿನ ಯುವ ಪೀಳಿಗೆಗಳು ಬಸವಣ್ಣನವರ ವಚನಗಳು ನಿತ್ಯ ಜೀವನದಲ್ಲಿ ಪಠಿಸಿದರೆ ಭಾರತ ಭವ್ಯ ರಾಷ್ಟ್ರವಾಗಿ ನಿರ್ಮಾಣವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ, ಪುರಸಭೆ ಉಪಾಧ್ಯಕ್ಷ ಮುಕ್ರಂ, ಮಾಜಿ ಶಾಸಕ ಅಧ್ಯಕ್ಷ ಸುಭಾಷ ಕಲ್ಲೂರ್, ಪುರಸಭೆ ಸದಸ್ಯ ಸುನಿಲ್ ಪಾಟೀಲ್, ಪುರಸಭೆ ಸದಸ್ಯ ಅಫ್ಸರಮಿಯ, ಜಿಪಂ. ಮಾಜಿ ಉಪಾಧ್ಯಕ್ಷ ಲಕ್ಷ್ಮಣರಾವ ಬುಳ್ಳಾ, ಜಿಪಂ. ಮಾಜಿ ಸದಸ್ಯ ವೀರಣ್ಣ ಪಾಟೀಲ್, ತಾಪಂ. ಅಧ್ಯಕ್ಷ ರಮೇಶ ಡಾಕುಳಗಿ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ್ ಮಾಳಶೆಟ್ಟಿ, ಅಂಬೇಡ್ಕರ್ ನಿಗಮದ ಮಾಜಿ ನಿರ್ದೇಶಕ ಬಸವರಾಜ ಆರ್ಯ, ವಿಜಯಕುಮಾರ ಚಟ್ಟಿ, ಮಹೇಶ ಅಗಡಿ, ಶ್ರೀನಾಥ ದೇವಣಿ ಸೇರಿ ಅನೇಕರಿದ್ದರು. ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್ ಸ್ವಾಗತಿಸಿದರು. ಮಲ್ಲಿಕಾರ್ಜುನ್ ಸಂಗಮಕರ್ ನಿರೂಪಿಸಿದರು.



ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಂತೆ ಹುಮನಾಬಾದ್ ಪಟ್ಟಣದಲ್ಲಿ ಸಾಂಸ್ಕೃತಿಕ ನಾಯಕ ಬಸವಣ್ಣನವರ ಅದ್ದೂ-ರಿಯಾಗಿ ಜಯಂತಿ ಆಯೋಜನೆ ಮಾಡಿರುವುದು ಸಂತಸ ತಂದಿದೆ. ಹುಮನಾಬಾದ್ ಬಸವೇಶ್ವರ ವೃತ್ತದಲ್ಲಿ ಬಸವಣ್ಣನವರ ಮೂರ್ತಿ ನಿರ್ಮಾಣಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ್ ತನು, ಮನ, ಧನದಿಂದ ಸಹಕಾರ ನೀಡಿದ್ದಾರೆ.

**-ಡಾ. ಸಿದ್ದು ಪಾಟೀಲ್**
**ಶಾಸಕ, ಹುಮನಾಬಾದ್**



ಸಾಂಸ್ಕೃತಿಕ ನಾಯಕ ಬಸವಣ್ಣನ ನಾಡಿನಲ್ಲಿ ಜನ್ಮ ತಾಳಿದ ನಾವೇ ಪುಣ್ಯವಂತರು. ಹೀಗಾಗಿ ಬಸವಣ್ಣನವರ ಕಾಯಕ ಸಿದ್ಧಾಂತ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ, ಹೋರಾಟ ಪರಿಕಲ್ಪನೆ ಕುರಿತು ಎಲ್ಲರೂ ಅರಿತುಕೊಂಡು ಸಮಾನತೆ ಹಾಗೂ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬೇಕು.

**-ರಾಜಶೇಖರ ಪಾಟೀಲ್**
**ಮಾಜಿ ಸಚಿವ, ಹುಮನಾಬಾದ್**

## ಆರೋಗ್ಯ ವೃದ್ಧಿಗೆ ನಗು ಅಗತ್ಯ

ಇಂದಿನ ಒತ್ತಡದ ಬದುಕಿನಲ್ಲಿ ಪ್ರತಿಯೊಬ್ಬರ ಆರೋಗ್ಯ ವೃದ್ಧಿಗೆ ನಗು ನಗು ಅಗತ್ಯವಾಗಿದೆ ಎಂದು ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ ಹೇಳಿದರು.

892ನೇ ಬಸವ ಜಯಂತಿ ನಿಮಿತ್ತ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಯೋಜಿಸಿದ್ದ ಹಾಸ್ಯ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಪ್ರತಿನಿತ್ಯ ದೈಹಿಕ ಕಸರತ್ತು ಮಾಡಬೇಕು. ಮಾನಸಿಕ ನೆಮ್ಮದಿಗೆ ಧ್ಯಾನ ಹಾಗೂ ಇತರರೊಂದಿಗೆ ಸಂತೋಷದಿಂದ ನಗು ನಗುತ ಬಾಳಬೇಕು ಎಂದರು.

ಗಂಗಾವತಿ ಪ್ರಾಣೇಶ ಸೇರಿ ಇತರೆ ಹಾಸ್ಯ ಕಲಾವಿದರು ನಡೆಸಿಕೊಟ್ಟ ಹಾಸ್ಯ ಕಾರ್ಯಕ್ರಮದಲ್ಲಿ ನೆರೆದಿದ್ದ ಜನಸ್ತೋಮ ನಕ್ಕು ನಕ್ಕು ಸಂಭ್ರಮಿಸಿದರು.

## ಕಾರ್ಮಿಕ ದಿನಾಚರಣೆ ನಿಮಿತ್ತ ಹಿರಿಯ ಕಾರ್ಮಿಕ ನಾಗಣ್ಣಾಗೆ ಸನ್ಮಾನ.




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಮೆ 3 ತಾಲೂಕಿನ ನಿರುಗುಡಿ ಗ್ರಾಮದ ನಾಗಣ್ಣಾ ರಾಮಣ್ಣಾ ಅಂಬರೆಯವರು 80 ವಯಸ್ಸಿನವರಾಗಿದ್ದು ಸುಮಾರು 60 ವರ್ಷಗಳಿಂದ ಬಸವಕಲ್ಯಾಣದಲ್ಲಿ ಆಶ್ರಯ ಇಲ್ಲದೆ ಥೇರ ಮೈದಾನದ ರಸ್ತೆಯ ಅಂಗಡಿಯ ಮುಂಭಾಗದಲ್ಲಿ ಕುಳಿತುಕೊಂಡು ಬಟ್ಟೆ ಹೊಲೆಯುವ ಕಾಯಕ ಮಾಡುತ್ತಿದ್ದು ಇಂದಿನ ದಿನ ಮಾನಗಳಲಿ ರೆಡಿಮೆಂಟ್ ಹೊಲೆದಿರುವ ಬಟ್ಟೆಗಳನ್ನು ಖರೀದಿಸುವ ಜನರ ಮಧ್ಯೆ ಇವರು ಇನ್ನೂ ಹೊಲಿಗೆ ಯಂತ್ರ ಬಟ್ಟೆ ಹೊಲೆಯುವ ಕಾರ್ಯ ಬಂದದರಲ್ಲಿಯೆ ಸುಖಿಯಾಗಿರುತ್ತಾರೆ. ಅಷ್ಟು ಇಷ್ಟು ಅನ್ನದೆ ಕೊಟ್ಟಿರುವ ಹಣದಲ್ಲಿ ಬಟ್ಟೆ ನಿಟ್ಟಾಗಿ ಹೊಲೆಯುವದರೊಂದಿಗೆ ಕಣ್ಣಿಗೆ ಕನ್ನಡಕ ಇರಲಾರದೆ ಸೊಜಿಗೆ ಧಾರ ಸೇರಿಸುವದೊಂದಿಗೆ ಬಟ್ಟೆ ಹೊಲೆಯುವದರಲಿ ಎಡುವುದಿಲ. ಹೊಲಿಗೆ ಯಂತ್ರ ಸ್ವಂತ ಇಲ್ಲ ಕಿರಾಯಿ ನೀಡಿ ಅಲ್ಲದೆ ಆಹಾರ ಸಹ ಸಂಜೆ ಹೊತ್ತಿಗೆ ಒಂದು ಊಟ ಮಾಡುತ್ತಾರೆ ಇವರ ಕಾಯಕ ನಿಷ್ಠೆ ಅಲ್ಲದೆ ಹಿರಿತನವನ್ನು ಕಂಡು ಕಾರ್ಮಿಕ ದಿನಾಚರಣೆ ದಿವಸ ಇವರನ್ನು ಅಂಕಣಕಾರ ನಾಗಪ್ಪಾ ನಿಣ್ಣೆ ಪತ್ರಕರ್ತರಾದ ಡಿ. ಕೆ. ಪ್ರಹ್ಲಾದ. ಹಾಗೂ ಮಹಾಲಿಂಗ ದೇವರು. ಸಂಗೀತ ಕಲಾವಿದ ರಾಜಕುಮಾರ ಮದಕಟಿ. ಛಾಯಾಗ್ರಾಹಕರಾದ ಧನರಾಜ ಸ್ವಾಮಿ. ಅಲ್ಲದೆ ಶಿವರಾಜ ರಂಜೇರೆ. ಜಗದೀಶ್ ಮಠಪತಿ. ಪ್ರೇಮ ವರವಟ್ಟೆ. ಲಿಂಗಪ್ಪ ಪಾಟೀಲ. ಇನ್ನಿತರರು ಸೇರಿ ನಾಗಣ್ಣಾ ಅಂಬರೆಯವರಿಗೆ ಸನ್ಮಾನಿಸಲಾಯಿತು.



ಬಸವಕಲ್ಯಾಣ:- ತಾಲೂಕಿನ ಕೋಹಿನೂರ ಗ್ರಾಮದಲ್ಲಿ ದಿನಾಂಕ 23.05.2025 ರಂದು ಜರುಗಲಿರುವ ಮಹಾತ್ಮ ಬಸವೇಶ್ವರ ಪ್ರತಿಮೆ ಅನಾವರಣ ಸಮಾರಂಭದ ಆಮಂತ್ರಣ ಪತ್ರಿಕೆ ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರ ಅಮೃತ ಹಸ್ತದಿಂದ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಆನಂದ ಪಾಟೀಲ, ಅಂಬರಾಯ ಉಗಾಜಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ : ಶ್ರೀ ಬಸವೇಶ್ವರ ದೇವಸ್ಥಾನದ 75ನೇ ಅಮೃತ ಜಾತ್ರಾ ಮಹೋತ್ಸವ ನಿಮಿತ್ಯ ನಗರದಲ್ಲಿ ಶುಕ್ರವಾರ ಪಲ್ಲಕ್ಕಿ ಹಾಗೂ ನಂದಿ ಧ್ವಜಗಳ ಭವ್ಯ ಮೆರವಣಿಗೆ ನಡೆಯಿತು. ಪಲ್ಲಕ್ಕಿ ಸೇವಾ ಸಮಿತಿಯ ಪ್ರಮುಖರು ಹಾಜರಿದ್ದರು. ಅಲ್ಲದೆ ಜಿ. ಪಂ. ಮಾಜಿ ಅಧ್ಯಕ್ಷರಾದ ಅನೀಲ ಭೋಸಾರೆ. ನಗರ ಸಭೆಯ ಸದಸ್ಯರಾದ ದೀಪಕ ಗುಡ್ಡಾ. ಯುವ ಮುಖಂಡರಾದ ಶಿವಕುಮಾರ ಬಿರಾದಾರ. ಭದ್ರು ನಿಣ್ಣೆ. ಸೇರಿದಂತೆ ಅನೇಕರು ಭಾಗವಹಿಸಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ಅದ್ದೂರಿಯಾಗಿ ನಡೆದ ರಥೋತ್ಸವ.



(ವರದಿ. ಡಿ. ಕೆ. ಪ್ರಹ್ಲಾದ)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಮಾ 3 ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದ 75 ನೇ ಜಾತ್ರಾ ಅಮೃತ ಮಹೋತ್ಸವ ನಿಮಿತ್ತವಾಗಿ ಇಲ್ಲಿನ ರಥ ಮೈದಾನದಲ್ಲಿ ಅದ್ದೂರಿಯಾಗಿ ಬಸವ ಭಕ್ತರ ಅಭಿಮಾನಿಗಳ ಸಾವಿರಾರು ಸಂಖ್ಯೆಯಲ್ಲಿ ರಥೋತ್ಸವ ವೈಭವ ಪೂರ್ಣವಾಗಿ ಬಸವೇಶ್ವರ ಮಹಾರಾಜ ಕಿ ಜೈ ಎನ್ನುವ ಘೋಷಣೆಗಳ ಮಧ್ಯೆ ಸಾಗಿ ಬಂತು ನಂತರ ರಂಗು ರಂಗಿನ ಚಿತ್ತಾರಗಳು ಮದ್ದು ಸುಡುವ ಮೂಲಕ ಆಕಾಶದಲ್ಲಿ ಮೂಡಿ ಬಂದವು. ಭಕ್ತರು ನೋಡಿ ಆನಂದದಿಂದ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬಿಡಿಪಿಸಿ ಅಧ್ಯಕ್ಷರಾದ ಬಸವರಾಜ ಕೊರಕೆ. ಹಾಗೂ ಸದಸ್ಯರು. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಹಾಗೂ ಪದಾಧಿಕಾರಿಗಳು. ಹಾಗೂ ವಿವಿಧ ಸಂಘಟನೆಯ ಪ್ರಮುಖರು ಸೇರಿದಂತೆ ಅನೇಕರು ಭಾಗವಹಿಸಿ ಜಾತ್ರೆಯ ಮುಕ್ತಾಯಕ್ಕೆ ತೆರೆಯೆಳೆದರು.

## ಸರ್ಕಾರಿ ಶಾಲೆಯ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿನಿ ಕನಿಕಾ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ : ಪಟ್ಟಣದ ಸರ್ಕಾರಿ ಕನ್ಯಾ ಪ್ರೌಢ ಶಾಲೆ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಕನಿಕಾ ತಂದೆ ಗುರಯ್ಯಾ ಈ ವಿದ್ಯಾರ್ಥಿನಿ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ 625ಅಂಕಗಳಿಗೆ 542. 86.72% ಅಂಕ ಪಡೆದು ಅಗ್ರಶ್ರೇಣಿಯಲ್ಲಿ ಉತ್ತೀರ್ಣಗೊಂಡಿದ್ದಾಳೆ.

ಹಿಂದಿ ವಿಷಯದಲ್ಲಿ 100 ಕ್ಕೆ 100 ಅಂಕ ಪಡೆದರೆ ಗಣಿತದಲ್ಲಿ 100 ಕ್ಕೆ 70, ಕನ್ನಡ ವಿಷಯದಲ್ಲಿ 125ಕ್ಕೆ 123, ವಿಜ್ಞಾನ ವಿಷಯದಲ್ಲಿ 100ಕ್ಕೆ 88, ಸಮಾಜ ವಿಜ್ಞಾನ ವಿಷಯದಲ್ಲಿ 100ಕ್ಕೆ, 88, ಇಂಗ್ಲಿಷ್ ವಿಷಯದಲ್ಲಿ 100ಕ್ಕೆ 73 ಅಂಕಗಳು ಪಡೆದಿದಾಳೆ. ವಿದ್ಯಾರ್ಥಿನಿಯ ಸಾಧನೆಗೆ ಪ್ರೌಢ ಶಾಲೆ ಮುಖ್ಯಗುರುಗಳಾದ ಬಸವರಾಜ ಮೇತ್ರೆ, ಹಿಂದಿ ಶಿಕ್ಷಕ ಸಂಜೀವನ ಭೋಸ್ಲೆ, ಗುಂಡಪ್ಪ ಕೋರಿ, ಪಂಚಶೀಲಾ ಕಟ್ಟಿಮನಿ, ಸಾದಿಯಾ ಸುಲ್ತಾನಾ, ಅಂಬಿಕಾ ಮಾಳಗೆ, ಅತಿಥಿ ಶಿಕ್ಷಕರಾದ ಹಸನ್, ಶಿಲ್ಪಾ, ಬ್ಲೇಸಿ ರಾಣಿ, ಐಶಾ, ಸಿರಿನ್, ಮಲ್ಲಮ್ಮ ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿನಿಗೆ ಅಭಿನಂದನೆ ಸಲ್ಲಿಸಿದ್ದಾರೆ.

## ಅಗ್ರಶ್ರೇಣಿಯಲ್ಲಿ ಉತ್ತೀರ್ಣಗೊಂಡ ತಹೋರಾ ಮಾಹಿನಗೆ ಅಸ್ಲಾಂಮಿಯಾ ಅವರಿಂದ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ : ಪಟ್ಟಣದ ಶಾಹೀನ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ತಹೋರಾ ಮಾಹಿನ್ ತಂದೆ ಮಹಮ್ಮದ್ ಚಂದಪಾಶಾ ಈ ವಿದ್ಯಾರ್ಥಿನಿ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ 625 ಅಂಕಗಳ ಪೈಕಿ 604. 96.77% ಪ್ರತಿಶತ ಅಂಕ ಪಡೆದು ಅಗ್ರಶ್ರೇಣಿಯಲ್ಲಿ ಉತ್ತೀರ್ಣಗೊಂಡ ಪ್ರಯುಕ್ತ ಪಟ್ಟಣದ ಶಿಕ್ಷಣ ಪ್ರೇಮಿ, ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ವಿದ್ಯಾರ್ಥಿನಿಗೆ ಶಾಲು ಹೊದಿಸಿ ಸನ್ಮಾನಿಸಿ ಶುಭ ಹಾರೈಸುತ್ತ ಮಾತನಾಡಿದ ಅವರು, ಶಾಹೀನ ಶಿಕ್ಷಣ ಸಂಸ್ಥೆ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಈ ಸಂಸ್ಥೆಯಲ್ಲಿ ಅಧ್ಯಯನ ಮಾಡಿ ಪ್ರತಿಶತ 604 ಅಂಕಗಳನ್ನು ಪಡೆದು ಶಾಲೆಗೆ ಮತ್ತು ಕುಟುಂಬಕ್ಕೆ ಕೀರ್ತಿ ತಂದಿದ್ದು ತುಂಬಾ ಸಂತೋಷವಾಗಿದೆ ವಿದ್ಯಾರ್ಥಿನಿ ವೈದ್ಯಳಾಗುವ ಗುರಿ ಹೊಂದಿರುವುದಾಗಿ ತಿಳಿಸಿದ್ದಾಳೆ ಅವಳು ಇಟಿಕೊಂಡಿರುವ ಗುರಿ ಸಾಧಿಸಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಪಿಕೆಪಿಎಸ್ ನಿರ್ದೇಶಕ ರಾಶೀದ್ ಪಟೇಲ್, ಮಹಮ್ಮದ್ ತಾಹೇರ್ ಪಾಶಾ, ಮಹಮ್ಮ ಅಬ್ದುಲ್ ಮತಿನ್ ಶಾದಬ್ ಇಂಜಿನಿಯರ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಗಮನ ಸೆಳೆದ ಕುಸ್ತಿ ಪಂದ್ಯ.



(ವರದಿ. ಡಿ. ಕೆ. ಪ್ರಹ್ಲಾದ)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಮೆ 3 ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದ 75 ನೇ ಜಾತ್ರಾ ಅಮೃತ ಮಹೋತ್ಸವ ನಿಮಿತ್ತವಾಗಿ ಇಲ್ಲಿನ ರಥ ಮೈದಾನದಲ್ಲಿ ಮುಂಜಾನೆ ಪ್ರಾರಂಭವಾದ ಕುಸ್ತಿ ಪಂದ್ಯದಲ್ಲಿ ದೂರ ದಿಂದ ಅಂದರೆ ಉಸ್ಮಾನ್ಬಾದ. ಲಾತೂರ್. ಮಹಾಗಾಂವ. ಹುಮನಾಬಾದ ಸೇರಿದಂತೆ ಸ್ಥಳಿಯರು ಸುತ್ತ ಮುತ್ತಲಿನ ಗ್ರಾಮದಿಂದ ಆಗಮಿಸಿದ ಸುಮಾರು 100 ಕಿಂತ ಹೆಚ್ಚು ಕುಸ್ತಿ ಪಟುಗಳು ಪಂದ್ಯದಲ್ಲಿ ಭಾಗವಹಿಸಿದ್ದರು. ಗೆಲುವಿಗಾಗಿ ಎದುರಾಳಿಯನ್ನು ಸೋಲಿಸಲು ತೊಡೆ ತಟ್ಟಿ ಕೈ ತಟ್ಟಿ ಕುಸ್ತಿ ಪಟುಗಳ ಮೇಲೆ ಎನ್ನೆಲಾ ಕಸರತ್ತು ಉಪಯೋಗಿಸಿ ಕುಸ್ತಿ ಕಣಕ್ಕೆ ರಂಗೇರಿಸಿದ್ದರು. ಇದನ್ನು ವೀಕ್ಷಿಸಲೆಂದು ಆಗಮಿಸಿದ ಕುಸ್ತಿ ಅಭಿಮಾನಿಗಳು ಚಪ್ಪಾಳೆ ತಟ್ಟಿ ಪೈಲ್ವಾನರಿಗೆ ಪ್ರೋತ್ಸಾಹಿಸಿದರು. ಕೊನೆಯ ಕುಸ್ತಿ ಯಲ್ಲಿ ಗೆಲವು ಸಾದಿಸುವ ಮೂಲಕ ಲಾತೂರಿನ ಪೈಲ್ವಾನ ವಿಶಾಲ ಲೋಕೆ ಪ್ರಥಮ . ಬೆಳಮಗಿಯ ಸಿದ್ದು ಪೂಜಾರಿ ದ್ವಿತೀಯ ಸ್ಥಾನ ಅಲ್ಲದೆ ಮುದಗಡನ ಪ್ರದೀಪ ಮಾಳಿ. ತೃತೀಯ ಬಹುಮಾನ ಪಡೆದರು. ಎ. ಪಿ. ಎಮ್. ಸಿ. ಮಾಜಿ ಅಧ್ಯಕ್ಷರಾದ ಸಿದ್ರಾಮಪ್ಪ ಗುದಗೆ. ಬಿಡಿಪಿಸಿ ನಿರ್ದೇಶಕರಾದ ಮಲ್ಲಯ್ಯಾ ಸ್ವಾಮಿ ಹಿರೇಮಠ. ಅಧ್ಯಕ್ಷತೆ ವಹಿಸಿದ್ದರು. ವಿಶ್ವಸ್ಥ ಸಮಿತಿಯ ಕಾರ್ಯದರ್ಶಿ ನಾಗಯ್ಯಾ ಸ್ವಾಮಿ. ಬಿಡಿಪಿಸಿ ಅಧ್ಯಕ್ಷರಾದ ಬಸವರಾಜ ಕೊರಕೆ. ಸಹ ಕಾರ್ಯದರ್ಶಿ ವಿವೇಕಾನಂದ ಹೊದಲೂರೆ. ನಿರ್ದೇಶಕರಾದ ವೀರಣ್ಣ ಹಲಶೇಟ್ಟೆ. ಸುಭಾಷ ಹೊಳಕುಂದೆ. ಕಾಶಪ ಸಕ್ಕರಬಾವಿ. ಜಗನ್ನಾಥ ಖೂಬಾ. ನಿವೃತ್ತ ಆರೋಗ್ಯ ಅಧಿಕಾರಿಗಳಾದ ವಿ. ಎಸ್. ಮಠಪತಿ. ನಾಗಣ್ಣಾ ಭೋರಗೆ. ಮುಖಂಡರಾದ ದೀಪಕ ಗಾಯಕವಾಡ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಗ್ರ ಶ್ರೇಣಿಯಲ್ಲಿ ಉತ್ತೀರ್ಣಗೊಂಡು ಸಂಸ್ಥೆಗೆ ಕೀರ್ತಿ ತಂದ ರತ್ನಗೆ ಸನ್ಮಾನ
## ಹಳ್ಳಿಖೇಡ್ ಬಿ. ಸರಸ್ವತಿ ಪ್ರೌಢ ಶಾಲೆ ವಿದ್ಯಾರ್ಥಿನಿ ರತ್ನ ತಾಲೂಕಿಗೆ ಪ್ರಥಮ





ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:- ತಾಲೂಕಿನ ಹಳ್ಳಿಖೇಡ ಬಿ. ಪಟ್ಟಣದ ಜೈ ವರಮಹಾಲಕ್ಷ್ಮಿ ಮಾತೆ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಸರಸ್ವತಿ ಪ್ರೌಢ ಶಾಲೆ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಈ ಪ್ರೌಢ ಶಾಲೆ ವಿದ್ಯಾರ್ಥಿನಿ ರತ್ನ ಸಂತೋಷ್ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣಗೊಂಡಿದ್ದಾಳೆ ಈ ಪ್ರೌಢ ಶಾಲೆಯ ಒಟ್ಟು 57 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಅಗ್ರಶ್ರೇಣಿಯಲ್ಲಿ 15 ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, 22 ಜನ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ರತ್ನ ಸಂತೋಷ್ ವಿದ್ಯಾರ್ಥಿನಿ 625 ಕ್ಕೆ 616 ಶೇಕಡಾ% 98.56 ಅಂಕಗಳು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಈ ಶಾಲೆಯ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಆಗಿದ್ದಾಳೆ ಪ್ರಮೋಧನಿ ಕಲ್ಲಪ್ಪ ಕಂದಗೋಳ 625ಕ್ಕೆ 573 ಶೇಕಡಾ% 92 ಅಂಕ ಪಡೆದಿದ್ದಾಳೆ. ತಾಲೂಕಿಗೆ ಪ್ರಥಮ ಸ್ಥಾನ ಗಿಟ್ಟಿಸಿರುವ ರತ್ನ ಸಂತೋಷ್ ಭಾಲ್ಕಿ ತಾಲೂಕಿನ ಕಟ್ಟಿತುಗಾಂವ ಗ್ರಾಮದ ಬಡ ಕುಟುಂಬದಲ್ಲಿ ಜನಸಿದ ವಿದ್ಯಾರ್ಥಿ ಆಗಿದ್ದಾಳೆ. ತಂದೆ ಇಲ್ಲದ ತಬ್ಬಲಿ ಆಗಿರುವ ಇವಳು ತಾಯಿ ಕೂಲಿ ಮಾಡಿ ಅಭ್ಯಾಸ ಮಾಡಿಸುತ್ತಿದ್ದಾಳೆ, ಮಗಳ ಸಾಧನೆಗೆ ತಾಯಿ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಕುಟುಂಬದ ಇಬ್ಬರು ಸಹೋದರಿಯರು ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ. ಹೀಗಾಗಿ ಪಿಯುಸಿ ವಿಜ್ಞಾನ ಅಧ್ಯಯನ ಮಾಡುವುದಾಗಿ ತಿಳಿಸಿದ್ದಾಳೆ. ವಿದ್ಯಾರ್ಥಿನಿಯ ಸಾಧನೆಗೆ ಶಾಲೆಯ ಮುಖ್ಯಗುರುಗಳಾದ ಶೋಭಾ ಕಾಡೋದೆ ಹಾಗೂ ಸಂಸ್ಥೆಯ ಅಧ್ಯಕ್ಷ ದೇವರಾಜ್ ಹೊಡೆಮನಿ ಹರ್ಷ ವ್ಯಕ್ತಪಡಿಸಿ, ಗ್ರಾಮೀಣ ಭಾಗದಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಉಳಿಸಿ ಬೆಳೆಸಲು ನಮ್ಮ ಸಂಸ್ಥೆ ಶ್ರಮಿಸುತ್ತಿದೆ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದೇವೆ. ನಮ್ಮ ಶಾಲೆಯ ವಿದ್ಯಾರ್ಥಿನಿ ತಾಲುಕಿನಲಿಯೇ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣಗೊಂಡಿದಕ್ಕೆ ಸಂತೋಷವಾಗಿದೆ, ಸಂಸ್ಥೆಯ ವಿದ್ಯಾರ್ಥಿಗಳು ಸಾಧನೆಗೆ ಶಿಕ್ಷಕರ ಪರಿಶ್ರಮವೇ ಈ ಫಲಿತಾಂಶಕ್ಕೆ ಸಾಕ್ಷಿಯಾಗಿದೆ ಎಂದರು. ಅಗ್ರಶ್ರೇಣಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಗಜೇಂದ್ರ ಅಷ್ಟಕರ್, ಅನೀಲಕುಮಾರ್, ವಿನೋದ್, ಸುಲೋಚನಾ, ಶೃತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರಾಜ್ಯದ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 05 ರಿಂದ 10 ಎಕರೆ ಜಮಿನಿನಲ್ಲಿ ಕಿರು ಅರಣ್ಯ ಅಥವಾ ಕಿರು ಪಕ್ಷಿಧಾಮ ನಿರ್ಮಾಣ ಮಾಡಿ



ಮಲ್ಲಮ್ಮನುಡಿವಾರ್ತೆಬೀದರ. ಮೇ.03:ಕರ್ನಾಟಕರಾಜ್ಯದ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 5 ರಿಂದ 10 ಎಕರೆಜಮಿನಿನಲ್ಲಿಕಿರು ಅರಣ್ಯ ಅಥವಾ ಕಿರು ಪಕ್ಷಿಧಾಮ ಅಭಿವೃದ್ಧಿ ಪಡಿಸಬೇಕೆಂದು ಪರಿಸರಪ್ರೇಮಿಮಹಲಿಂಗಯ್ಯ ತುಮಕೂರ್ ಅವರು ಸೈಕಲ್ ಜಾಥಾ ಮೂಲಕ ಬೀದರ ಜಿಲ್ಲೆಗೆಆಗಮಿಸಿ ಇಂದು ಅಪರ ಜಿಲ್ಲಾಧಿಕಾರಿ ಶಿವಕುಮಾರ ಶಿಲವಂತ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಜಾಗತೀಕ ತಾಪಮಾನ ಏರಿಕೆಯಿಂದಾಗಿಗಾಳಿ,ನೀರು ಮತ್ತು ಇತರ ರೀತಿಯ ಮಾಲಿನ್ಯಗಳು ಪರಿಸರ ಮತ್ತು ಜೀವಿಗಳಿಗೆ ದೊಡ್ಡ ಅಪಾಯವನ್ನುಂಟುಮಾಡುತ್ತಿದೆ. ಪ್ರಾಣಿ–ಪಕ್ಷಿಗಳುಸೇರಿದಂತೆಸಕಲ ಜೀವ ರಾಶಿಗಳಿಗೆ ಆರೋಗ್ಯ ಹಾನಿಕರವಾಗಿರುತ್ತಿವೆ.ಪರಿಸರ ಸಂರಕ್ಷಣೆಗೆ ಮೂಲಭೂತ ಸ್ಥಾನಮಾನನೀಡಿಪ್ರತಿಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 5 ರಿಂದ 10 ಎಕರೆ ಜಮೀನಿನಲ್ಲಿ ಕಿರು ಅರಣ್ಯ ಅಥವಾ ಕಿರು ಪಕ್ಷಿಧಾಮ ನಿರ್ಮಾಣ ಮಾಡುವಂತೆ ಕರ್ನಾಟಕ ರಾಜ್ಯ ಸರಕಾರ ಯೋಜನೆಯನ್ನು ರೂಪಿಸಿ ಜಾರಿಗೆ ತಂದು ಅಭಿವೃದ್ಧಿ ಪಡಿಸಬೇಕು ಮತ್ತು ರಾಜ್ಯದ ಪ್ರತಿ ಸರಕಾರಿ ಶಾಲೆಗಳಿಗೆ ಮೂಲಭೂತಸೌಕರ್ಯಗಳನ್ನು ಒದಗಿಸಿಅಭಿವೃದ್ಧಿಪಡಿಸಬೇಕು ಎಂದು ಸರಕಾರಕ್ಕೆ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಕಲ್ಯಾಣಕರ್ನಾಟಕಕಲಾವಿದರ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷರಾದವಿಜಯಕುಮಾರ ಸೋನಾರೆ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಸುನೀಲ ಭಾವಿಕಟ್ಟಿ, ರೈತ ಮುಖಂಡ ಬಸವರಾಜಅಷ್ಟೂರೆ,ಪತ್ರಕರ್ತ ಚಂದ್ರಕಾಂತಹಳ್ಳಿಖೇಡಕರ್, ವಿಜಯಕುಮಾರ ಭಂಡೆ, ಸೇರಿದಂತೆ ಮತ್ತಿತರರು ಇದ್ದರು.

# ಸಿಂದೋಲದಲ್ಲಿ ಜರುಗಿದ ರತ್ನಮ್ಮ ತಾಯಿಯವರ ತುಲಾಭಾರ



ಮಲ್ಲಮ್ಮ ನುಡಿ ವಾರ್ತೆ ಬೀದರ.ಮೇ.03:ತಾಲ್ಲೂಕಿನ ಸಿಂದೋಲ್ ಗ್ರಾಮದಲ್ಲಿ ಇತ್ತೀಚಿಗೆಶ್ರೀರಾಚೋಟೇಶ್ವರ ಶಿವಾಚಾರ್ಯರ ಹಾಗೂ ಸರ್ವಶರಣರಸ್ಮರಣೋತ್ಸವ ಹಾಗೂರತ್ನಮ್ಮತಾಯಿಯವರ ತುಲಾಭಾರ ಬಹು ಸಡಗರ ಸಂಭ್ರಮಗಳಿಂದ ಜರಗಿತು ಬೆಳಗ್ಗೆ 8:00 ರಿಂದ ಶ್ರೀ ಶಿವಶಂಕರಯ್ಯ ಸ್ವಾಮಿ ಹಿರೇಮಠಲಾಡಗೇರಿ ಹಾಗೂ ರಾಚಯ್ಯಸ್ವಾಮಿ ಶಾಂತಯ್ಯ ಸ್ವಾಮಿ ಅವರ ತಂಡದವರಿಂದ ಸಂಗೀತ ರುದ್ರಾಭಿಷೇಕ ಜರಗಿತು ಮಧ್ಯಾಹ್ನ12:30ಕ್ಕೆ ಧಾರ್ಮಿಕ ಸಭೆಯಲ್ಲಿ ಶ್ರೀ ಸೋಮಯ್ಯಸ್ವಾಮಿಹಿರೇಮಠ ಅವರ ಸನ್ನಿಧಿಯಲ್ಲಿ ಶ್ರೀ ಸಿದ್ದರಾಮಯ್ಯಹಿರೇಮಠರ ಸ್ವಾಮಿ ಅಧ್ಯಕ್ಷತೆಯಲ್ಲಿ ಶ್ರೀ ಶಿವಶಂಕರಯ್ಯ ಹಿರೇಮಠ್ ಲಾಡಗೇರಿಹಾಗೂಶ್ರೀವೀರಭದ್ರಪ್ಪ ಶರಣರ ಸಮ್ಮುಖದಲ್ಲಿ ಮುಖ್ಯ ಅತಿಥಿಗಳಾಗಿಗುರುನಾಥರಾಜಗಿರಾ ಬಗದಲ ಚಂದ್ರಯ್ಯ ಸ್ವಾಮಿ ಕೋಕಿಲಾ ಮಹಾದೇವಪ್ಪಾ ಮುಖ್ಯ ಅತಿಥಿಗಳಾಗಿ ಡಾ. ವಿ.ಎಸ್ ಕೋರಿ ಜಾನುವಾರು ಅಧಿಕಾರಿ ಮಾತನಾಡುತ್ತಾ ಶ್ರೀ ರಾಚೋಟೇಶ್ವರರು ಭಕ್ತರ ಕಲ್ಪವೃಕ್ಷಕಾಮಧೇನು ಹಾಗೂ ಸಂತಾನಫಲ ಇಷ್ಟಾರ್ಥ ಸಿದ್ಧಿ ದಾಯಕರಾಗಿದ್ದರು ಎಂದು ತಿಳಿಸಿದರು. ಅಮೃತಪ್ಪ ರಂಜೇರಿವಿರೂಪಾಕ್ಷಪ್ಪಪಾಟೀಲ್ ರೇವಣಪ್ಪಮೋರೆಶ್ರೀ ಕಲ್ಲಪ್ಪ ಎ.ಎಸ್.ಐರೇವಣಪ್ಪಾಮುಲ್ಗೆ ಮಹಾದೇವಪ್ಪ ಹಿಪ್ಪಳಗಾವ ಶ್ರೀಮತಿ ಶಾಂತಬಾಯಿ ಮಲ್ಲಿಕಾರ್ಜುನ ರಾಸುರ ಮಾತನಾಡುತ್ತಾ ಗ್ರಾಮೀಣ ಭಾಗದಲ್ಲಿಇಂತಹಕಾರ್ಯಕ್ರಮಗಳು ಮಾಡುವುದರಿಂದ ಅಜ್ಞಾನ ಅಂಧಕಾರ ಮೂಢನಂಬಿಕೆ ಹಾಗೂ ಕಂದಾಚಾರ ನಿವಾರಣೆಯಾಗಿ ಎಲ್ಲರೂ ಸತ್ಸಂಗದಲ್ಲಿ ಇರುವುದರಿಂದ ಪಾಪಕರ್ಮಗಳುಭಸ್ಮವಾಗುತ್ತವೆ ಎಂದು ತಿಳಿಸಿದರು.

ಮಾತೋಶ್ರೀ ರತ್ನಮ್ಮ ತಾಯಿಯವರ ತುಲಾಭಾರ ಹಿರೇಮಠಪರಿವಾರದವರುಬಹು ಭಕ್ತಿಯಿಂದ ನೆರವೇರಿಸಿದರು. ವೇದಿಕೆಯಲ್ಲಿ ಪಂಚಯ್ಯ ಸ್ವಾಮಿ ಮಾಹಾಂತಯ್ಯ ಸ್ವಾಮಿ ಕಾಶಿನಾಥ ಸ್ವಾಮಿ ಸಂಜು ಕುಮಾರ ಪಾಟೀಲ ದಿಲೀಪ ನೀಲಂ ಭೀಮಣ್ಣ ಭೆಮಳಗಿ ಚಂದ್ರಕಾಂತ್ ನ್ಯಾಮ್ತಾಬಾದ್ ಬಸವಣ್ಣ ಬಾಂಬೆ ವಿಜಯಕುಮಾರ ರೆಡ್ಡಿ ಬಗದಲ ಪಾತರಪಳ್ಳಿ ಭಂಗೂರ ಹಾಗೂ ಬೀದರ ನಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ಯುವ ಕಲಾವಿದ ಕಿರಣ ಹಿರೇಮಠ ಹಾಗೂ ಸಂಗಡಿಗ–ರಿಂದ ಸಂಗೀತ ದರ್ಬಾರ ಜರಗಿತು. ಸಂಗಮೇಶ ಹಿರೇಮಠ ಸರ್ವರನ್ನು ಸ್ವಾಗತಿಸಿದರು. ವಿರೂಪಾಕ್ಷ ದೇವರು ನಿರೂಪಿಸಿದರು. ಶರಣಯ್ಯಸ್ವಾಮಿವಂದಿಸಿದರು. ಇಡೀ ರಾತ್ರಿ ಶಿವಶಕ್ತಿ ಸತ್ಸಂಗ ಬಳಗದವರಿಂದಭಜನೆಸತ್ಸಂಗ ಕಾರ್ಯಕ್ರಮ ನಡೆಯಿತು.

# ಕೇಂದ್ರ್ರದ ಜಾತಿಗಣತಿ ನಿರ್ಧಾರ ಕಾಂಗ್ರೆಸ್ ಬುಡ ಅಲ್ಲಾಡಿಸಿದೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 03 : ಕೇಂದ್ರಸರ್ಕಾರಮುಂಬರುವ ವರ್ಷಜನಗಣತಿಜೊತೆಯಲ್ಲೇ ಜಾತಿ ಗಣತಿ ಸಹ ಮಾಡಲು ನಿರ್ಧರಿಸಿದಕ್ರಮಐತಿಹಾಸಿಕವಾಗಿದೆ. ಪ್ರಧಾನ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಈ ವಿಳಯದಲ್ಲಿ ಇರಿಸಿದ ದಿಟ್ಟ ಹೆಜ್ಜೆ ಕಾಂಗ್ರೆಸ್ ಬುಡವನ್ನೇ ಅಲ್ಲಾಡಿಸಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್ ಹುಡಗಿ, ವಿಧಾನ ಪರಿಳತ್ ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ ಹೇಳಿದ್ದಾರೆ.ದೇಶದ ಸ್ವಾತಂತ್ರ್ಯ ಬಳಿಕ:(1931ರ ನಂತರ) ಜಾತಿ ಗಣತಿ ನೆಡೆದಿಲ್ಲ. ಸುದೀರ್ಘ ಅವಧಿ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಯಾವತ್ತೂ ಈ ಕಾರ್ಯ ಮಾಡಿಲ್ಲ. ಇದೀಗ ಕೇಂದ್ರ ಸರ್ಕಾರ ಜಾತಿಗಣತಿ ಮಾಡುವ ನಿರ್ಧಾರ ಕೈಗೊಂಡು ಎಲ್ಲ ವರ್ಗದವರಿಗೂ ಸಾಮಾಜಿಕ ನ್ಯಾಯ ಕಲ್ಪಿಸಲು ಹೊರಟಿದೆ. ಸಾಮಾಜಿಕ ಅವಶ್ಯಕತೆಯ ನೈಜ ದತ್ತಾಂಶ ಸಂಗ್ರಹವನ್ನು ಮಾಡಲಿರುವುದರಿಂದ ಎಲ್ಲ ವರ್ಗದ ಜನರ ಮೆಚ್ಚುಗೆಗೆ ಕಾರಣವಾಗಿದೆ ಎಂದು ಇಲ್ಲಿ ಹೊರಡಿಸಿದಜಂಟಿಪ್ರಕಟಣೆಯಲ್ಲಿ ತಿಳಿಸಿದ್ದಾರೆ. 1951ರಿಂದ ಪ್ರತಿ ಹತ್ತು ವರ್ಷಕ್ಕೊಮ್ಮೆ ಜನಗಣತಿ ನೆಡದಿದೆ . 1951 , 1961 , 1971, 1981, 1991 ಮತ್ತು 2011ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವಿತ್ತು. ಆರು ಸಲ ಅವಕಾಶ ಸಿಕ್ಕರೂ ಏನೇನೂ ಮಾಡಿಲ್ಲ. ಸದಾ ಜಾತಿಗಣತಿಗೆ ವಿರೋಧಿಸುತ್ತಲೇ ಬಂದಿದೆ. ಇದು ಕಾಂಗ್ರೆಸ್ ಪಕ್ಷದ ಮನಸ್ಥಿತಿ ಹಾಗೂ ಜನ ವಿರೋಧಿ ನೀತಿಗೆ ನೀದರ್ಶನ ಎನಸಿದೆ. ಇದೀಗ ಕೇಂದ್ರ ಸರ್ಕಾರ ಜಾತಿ ಗಣತಿಗೆ ಮುಂದಾಗಿರುವುದು ಕಾಂಗ್ರೆಸ್ ಪಕ್ಷಕ್ಕೆ ಸಹಿಸಲಾಗುತ್ತಿಲ್ಲ.ಒಬಿಸಿ ಹಿನ್ನೆಲೆಯ ಪ್ರಧಾನ ನರೇಂದ್ರ



ಮೋದಿಯವರ ಸರ್ಕಾರದ ಈ ನಿರ್ಧಾರ ದೇಶದ ಇತಿಹಾಸದಲ್ಲಿ ಕ್ರಾಂತಿಕಾರಿ ಹೆಜ್ಜೆ ಎನಸಿದೆ. ಹೀಗಾಗಿ ಜಾತಿಗಣತಿ ನೆಪದಲ್ಲಿ ಹಿಂದುಳಿದ ವರ್ಗಗಳನ್ನು ಎತ್ತಿ ಕಟ್ಟಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕಾಂಗ್ರೆಸ್ ನಾಯಕರು ವಿಫಲ ಪ್ರಯತ್ನ ನೆಡಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಂವಿಧಾನದ 246ನೇ ವಿಧಿಯ ಅನ್ವಯ ಜನಗಣತಿ ಅಥವಾ ಜಾತಿಗಣತಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆಮಾತ್ರಇದೆ. ಹೀಗಾಗಿ ಕೇಂದ್ರಸರ್ಕಾರಬರುವ ವರ್ಷ ಜನಗಣತಿಯೊಂದಿಗೆ ಜಾತಿ ಗಣತಿಯನ್ನುಸಾಂವಿಧಾನಕ ಮಾನ್ಯತೆಯೊಂದಿಗೆನಡೆಸಲು ಮುಂದಾಗಿದೆ.ಇದು ಸಮಾಜದ ಸಾಮಾಜಿಕ ಮತ್ತು ಆರ್ಥಿಕ ರಚನೆ ಬಲಪಡಿಸುವ ಜೊತೆಗೆರಾಷ್ಟ್ರದ ವಿಕಾಸಕ್ಕೆ ಮತ್ತಷ್ಟು ವೇಗ ಸಹ ನೀಡಲಿದೆ. ಬಿಜೆಪಿಯಾವಾಗಲೂ ಸಮಾಜ ಮತ್ತು ದೇಶದ ಮೌಲ್ಯ, ಜನರ ಹಿತಾಸಕ್ತಿಗಳಿಗೆ ಬದ್ಧವಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ರಾಜ್ಯದಲ್ಲಿ ಸಿದ್ಧರಾಮಯ್ಯ ಸರ್ಕಾರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹೆಸರಿನಲ್ಲಿ ಮಾಡಿದ ಜಾತಿ ಗಣತಿಯು ಗೊಂದಲದ ಗೂಡಾಗಿದೆ. ಪ್ರವರ್ಗ 1ರಲ್ಲಿದ್ದ ಅತಿ ಹಿಂದುಳಿದ ಜಾತಿಗಳಿಗಿದ್ದ ಆರ್ಥಿಕ ಮಾನದಂಡ ಕಿತ್ತು ಹಾಕಿ ಅನ್ಯಾಯ ಮಾಡಿದೆ. ನೂರಾರು ಸಣ್ಣ ಜಾತಿಗಳು ತಮ್ಮ ಸಂಖ್ಯೆ ಬಗ್ಗೆ ತಕರಾರು ಎತ್ತಿದ್ದು, ಇದು ಅವೈಜ್ಞಾನಿಕ ಎಂದು ಹೇಳಿವೆ. ಕಾಂಗ್ರೆಸ್ನ ಅನೇಕ ನಾಯಕರು ಬಹಿರಂಗವಾಗಿಯೇ ಇದಕ್ಕೆ ವಿರೋಧಿಸಿದ್ದಾರೆ. ತಮ್ಮ ಕುರ್ಚಿ ಉಳಿಸಿಕೊಳ್ಳಲು ಅವರು ಸಿದ್ಧರಾಮಯ್ಯ ಜಾತಿ ಗಣತಿ ವಿಳಯ ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದ್ದಾರೆ. ಕರ್ನಾಟಕದ ಜಾತಿ ಗಣತಿ ವರದಿಗೆ ಪರ್ಯಾಯವಾಗಿ ಕೇಂದ್ರ ಸರ್ಕಾರದ ಜಾತಿ ಗಣತಿ ವರದಿ ಸಮಗ್ರ ದತ್ತಾಂಶ, ವಾಸ್ತವ ಅಂಕಿ ಅಂಶಗಳೊಂದಿಗೆ ಬರಲಿದೆ. ಗೊಂದಲ ಹಾಗೂ ಅವೈಜ್ಞಾನಿಕವಾದ ರಾಜ್ಯದ ವರದಿಗೆ ಪರ್ಯಾಯ ದಾರಿ ತೋರಿಸಿ ರಾಜ್ಯ ಸರ್ಕಾರದ ನಿಜಬಣ್ಣವನ್ನು ಕೇಂದ್ರದ ವರದಿ ಬಯಲು ಮಾಡಲಿದೆ. ಹಿಂದುಳಿದ ವರ್ಗಗಳ ಎಲ್ಲ ರೀತಿಯ ಸಾಮಾಜಿಕ ನ್ಯಾಯದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಒದಗಿಸಲು ಬಿಜೆಪಿ ಬದ್ಧವಾಗಿದೆ ಎಂದು ಹೇಳಿದ್ದಾರೆ.

# ತಮ್ಮನ ಸಾವಿಗೆ ನ್ಯಾಯ ಸಿಗದಿದ್ದರೆ ಸಾಮೂಹಿಕ ಆತ್ಮಹತ್ಯೆ: ರಾಜಶ್ರೀ

## ವಾರದಲ್ಲಿ ಆರೋಪಿ ಪತ್ತೆ ಹಚ್ಚದಿದ್ದರೆ ಎಸ್‌ಪಿ ಕಚೇರಿ ಮುಂದೆ ತಮಟೆ ಚಳುವಳಿ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಮೇ.03:ಜಿಲ್ಲೆಯ ಹುಮನಾಬಾದ ತಾಲೂಕಿನ ಸಕ್ಕರಗಂಜ್ ವಾಡಿಯಲ್ಲಿ ಏಪ್ರಿಲ್ 23 ರಂದು ಬೆಳಿಗ್ಗೆ ಸಂದರ್ಭದಲ್ಲಿ ಸಿದ್ಧಾರೂಢ ತಂದೆ ಜಾಲೆಂದರ್ ಬಾವಗೆ ಕೊಲೆಯಾಗಿದ್ದು, ಅವರು ನನ್ನ ಪತಿ. ಕೊಲೆಯಾಗಿ ಇಂದಿಗೆ 11 ದಿನ ಕಳೆದರೂ ಸೂಕ್ತ ತನಿಖೆಯಾಗಿಲ್ಲ.ಗಂಡನ ಸಾವಿಗೆ ಪೊಲೀಸ್ ಇಲಾಖೆ ಸೂಕ್ತ ನ್ಯಾಯ ಒದಗಿಸಿಕೊಡಬೇಕೆಂದು ಮೃತ ಸಿದ್ಧಾರೂಢ ಪತ್ನಿ ಅರ್ಚನಾ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕ–ರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ನಮ್ಮ ಮನೆಯಲ್ಲಿ ಮೂರು ಜನ ಮಕ್ಕಳು ಚಿಕ್ಕವರಿದ್ದಾರೆ. ದಿನಾ ಬೆಳಗಾದರೆ ನಮಗೆ ಜೀವಭಯವಿದೆ. ಯಾವಾಗ ಯಾರು ಬಂದು ನಮಗೂ ಹತ್ಯೆಮಾಡುವರೋ ಎನ್ನುವ ಭಯ ಕಾಡುತ್ತಿದೆ. ದಯವಿಟ್ಟು ನಿಷ್ಪಕ್ಷಪಾತ ತನಿಖೆ ನಡೆಸಿ ಗಂಡನ ಕೊಲೆ ಮಾಡಿದ ಆರೋಪಿಗೆ ಬಂಧಿಸಿ ಪತಿಯ ಆತ್ಮಕ್ಕೆ ಶಾಂತಿ ಸಿಗುವಂತೆ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಮೃತ ಸಿದ್ಧಾರೂಢಬಾವಗೆಸಹೋದರಿ ರಾಜಶ್ರೀ ಮಾತನಾಡಿ ನನ್ನ ತಮ್ಮನ ಹತ್ಯೆಯಾಗಿ ಇಂದಿಗೆ 11 ದಿವಸಗಳು ಕಳೆದರೂ ಸೂಕ್ತ ತನಿಖೆಯಾಗಿಲ್ಲ. ಯಾಂತ್ರಿಕರಣದ ಇಂದಿನ ಕಾಲದಲ್ಲಿ ಇಷ್ಟೊಂದು ವಿಳಂಬ ಮಾಡುತ್ತಿರುವುದೇಕೆ? ಎಂದು ಪ್ರಶ್ನೆ ಮಾಡಿದರಲ್ಲದೆ ನಮ್ಮ ಮನೆಗೆ ಹುಮನಾಬಾದ ಶಾಸಕ ಸಿದ್ದು ಪಾಟೀಲ ಅವರಾಗಲೀ, ಮಾಜಿ ಸಚಿವ ರಾಜಶೇಖರ ಪಾಟೀಲ ಅವರಾಗಲಿ, ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರಾಗಲೀ ಇಂದಿಗೂ ಭೇಟಿ ನೀಡಿಲ್ಲ. ಸೌಜನ್ಯಕ್ಕಾದರೂ ಬಂದು ಸಮಾಧಾನ ಹೇಳಿಲ್ಲ. ನನ್ನ ತಮ್ಮನ ಜೀವ ಹೋಗಿದೆ. ಅದನ್ನು ಮರಳಿ ಕೊಡಲಿಕ್ಕಾಗುವುದಿಲ್ಲ ನಿಜ ಆದರೆ ನ್ಯಾಯನಾದರೂ ಒದಗಿಸಿಕೊಡಬಹುದಲ್ಲ. ಬಡವರಿಗೊಂದು ನ್ಯಾಯ? ಶ್ರೀಮಂತರಿಗೊಂದುನ್ಯಾಯಾನಾ? ಎಂದು ಕಣ್ಣೀರು ಹಾಕಿದರು. ಒಂದು ವೇಳೆ ವಾರದೊಳಗಾಗಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸದಿದ್ದರೆ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಮುಂದೆ ಕುಟುಂಬದ ಸದಸ್ಯರೆಲ್ಲ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮೃತನ ಸಹೋದರಿ ರಾಜಶ್ರೀ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಪ್ರದೀಪ ಹೆಗಡೆ ಮಾತನಾಡಿ ಮೃತನ ಕುಟುಂಬಸ್ಥರಿಗೆ ನ್ಯಾಯ ಸಿಗುವವರೆಗೆ ಅಂಬೇಡ್ಕರ್ ಸೇನೆ ಅವರ ಬೆಂಬಲಕ್ಕೆ ನಿಲ್ಲಲಿದೆ.

ಏಳು ದಿವಸಗಳ ಒಳಗಾಗಿ ಪೊಲೀಸರು ತನಿಖೆ ನಡೆಸಿ ಆರೋಪಿಯನ್ನು ಬಂಧಿಸದಿದ್ದರೆ ಎಸ್‌ಪಿ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಹಾಗೂ ತಮಟೆ ಚಳುವಳಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಂಬೇಡ್ಕರ್ ಸೇನೆಯ ಉಪಾಧ್ಯಕ್ಷ ರಾಜಕುಮಾರ ಹಳ್ಳಿಖೇಡಕರ್, ಪ್ರಧಾನ ಕಾರ್ಯದರ್ಶಿ ಶಿವರಾಜ ದೊಡ್ಡಿ, ಸಂಘಟನಾ ಕಾರ್ಯದರ್ಶಿ ಡೇವಿಡ್ ಸೋನೆ, ಕ.ಕ.ರಕ್ಷಣಾ ವೇದಿಕೆಯ ಶಾಮಲಾಲ ತಾ–ಕೂರ್ ಸೇರಿದಂತೆ ಗ್ರಾಮದ ಹಿರಿಯ ಮುಖಂಡರು ಉಪಸ್ಥಿತರಿದ್ದರು.

# ನಾಳೆ ಲಕ್ಷ್ಮಿಬಾಯಿ ಖಂಡ್ರೆ ಪಬ್ಲಿಕ್ ಶಾಲೆ ಉದ್ಘಾಟನೆ:ಸಂಸದ ಸಾಗರ ಖಂಡ್ರೆ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮೇ.3: ಪಟ್ಟಣದಲ್ಲಿ ಶಾಂತಿವರ್ಧಕಶಿಕ್ಷಣಸಂಸ್ಥೆಯಡಿ ಹೊಸದಾಗಿ ಸ್ಥಾಪಿಸಿರುವ ಲಕ್ಷ್ಮಿಬಾಯಿ ಪಬ್ಲಿಕ್ ಶಾಲೆ ಉದ್ಘಾಟನೆ ಸಮಾರಂಭ ಮೇ.5 ಸೋಮವಾರದಂದು ಜರುಗಲಿದೆ ಎಂದು ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮತ್ತು ಸಂಸದರು ಆಗಿರುವ ಸಾಗರ ಖಂಡ್ರೆ ತಿಳಿಸಿದ್ದಾರೆ. ಪಟ್ಟಣದ ಲಕ್ಷ್ಮಿಬಾಯಿ ಖಂಡ್ರೆ ಪಬ್ಲಿಕ್ ಶಾಲೆಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಪಟ್ಟಣದ ಹರಳಯ್ಯ ತಾಂತ್ರಿಕ ಕಾಲೇಜಿನ ಕಟ್ಟಡ ನವೀಕರಿಸಿ ಲಕ್ಷ್ಮಿಬಾಯಿ ಖಂಡ್ರೆ ಪಬ್ಲಿಕ್ ಶಾಲೆಯ ತರಗತಿ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 10.30ಕ್ಕೆ ಉದ್ಘಾಟನೆ ಸಮಾರಂಭ ನೆರವೇರಲಿದೆ. ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಮೆಹಕರ್ ತಡೋಳಾ ಮಠದ ರಾಜೇಶ್ವರ ಶಿವಾಚಾರ್ಯ ದಿವ್ಯಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸಮಾರಂಭ ಉದ್ಘಾಟಿಸಲಿದ್ದಾರೆ. ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಸೇರಿದಂತೆ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶಿಕ್ಷಣ ನೀಡುವ ಸದಾಶಯದೊಂದಿಗೆ ನಮ್ಮ ಅಜ್ಜಿಯವರಾದ ಲಕ್ಷ್ಮಿಬಾಯಿ ಖಂಡ್ರೆ ಹೆಸರಿನ ಪಬ್ಲಿಕ್ ಶಾಲೆ ತೆರೆಯಲಾಗಿದೆ. ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್ ಸಹಯೋಗದಲ್ಲಿ ಹೆಣ್ಣುಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ನಿರ್ಧರಿಸಲಾಗಿದ್ದು ಈಗಾಗಲೇ ನುರಿತ ಶಿಕ್ಷಕರು, ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾಗಿದೆ. ಅಗತ್ಯ ಪಾಠೋಪಕರಣ, ಪೀಠೋಪಕರಣ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಪ್ರಾಥಮಿಕ ಹಂತದಲ್ಲಿ ನರ್ಸರಿ ಯಿಂದ ಏಳನೇ ತರಗತಿ ವರೆಗೆ ರಾಜ್ಯ ಪಠ್ಯ ಕ್ರಮದಂತೆ ಆಂಗ್ಲಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತದೆ. ಬಸ್, ವಸತಿ ಸೌಲಭ್ಯ ಸೇರಿ ವಿವಿಧ ಸುಸಜ್ಜಿತ ಸವಲತ್ತುಗಳನ್ನು ನೀಡಲಾಗುತ್ತದೆ. ಪ್ರವೇಶ ಪ್ರಾರಂಭವಾಗಿದ್ದು ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಅಂಕುಶ ಢೋಲೆ, ಪ್ರಾಚಾರ್ಯ ಸಂತೋಷ ಮಿರಾಜಕರ್, ಮಾನವ ಸಂಪನ್ಮೂಲ ಅಧಿಕಾರಿ ಗುರುನಾಥ ಕುಡತೆ, ಎನ್.ಎಂ.ಪಾಟೀಲ್ ಇದ್ದರು. ದೊಡ್ಡ ಮಹಾ ನಗರಗಳಲ್ಲಿ ಸಿಗುವ ಕೌಶಲಾಧಾರಿತ ಶಿಕ್ಷಣ ಸೌಲಭ್ಯಗಳನ್ನು ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ದೊರಕಿಸಬೇಕು ಎನ್ನುವ ಆಶಯದೊಂದಿಗೆ ಹೆಣ್ಣುಮಕ್ಕಳಿಗಾಗಿಯೇ ಪ್ರತೆ–್ಯಕ ಪಬ್ಲಿಕ್ ಶಾಲೆ ತೆರೆದು ಶಿಕ್ಷಣದ ಜತೆಗೆ ಅತ್ಯಾಧುನಿಕ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪಾಲಕರು ಸದುಪಯೋಗ ಪಡಿಸಿಕೊಳ್ಳಬೇಕು.– ಸಾಗರ ಖಂಡ್ರೆ ಕಾರ್ಯದರ್ಶಿಗಳು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಭಾಲ್ಕಿ

# ಡೈಮಂಡ ಪ್ರೌಢ ಶಾಲೆಗೆ ಉತ್ತಮ ಫಲಿತಾಂಶ ಮಕ್ಕಳ ಸಾಧನೆಗೆ ಪಾಲಕರ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಮೇ.3:ಪ್ರಸಕ್ತ ಸಾಲಿನ ಹತ್ತನೇ ತರಗತಿಯ ಫಲಿತಾಂಶ ಪ್ರಕಟವಾಗಿದ್ದು ಭಾಲ್ಕಿ ನಗರದ ಪ್ರತಿಷ್ಠಿತ ಡೈಮಂಡ ಪ್ರೌಢ ಶಾಲೆಯ ವಿದ್ಯಾರ್ಥಿನಿಯರಾದ ಕಾವೇರಿ ತಂದೆ ಶ್ರೀಮಂತ, ಭಗವತಿ ತಂದೆ ಸುನಿಲಕುಮಾರ ಮತ್ತು ವೈಷ್ಣವಿ ತಂದೆ ವಿನೋದಕುಮಾರ 619/625 (99.04%) ಅಂಕ ಪಡೆದು ರಾಜ್ಯಕ್ಕೆ ಏಳನೇ ರ್‍ಯಾಂಕ್ ಪಡೆಯುವುದರ ಮೂಲಕ ಭಾಲ್ಕಿ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ.

ದೀಪಾಲಿ ಪ್ರಕಾಶ 616/98.56, ಕಾವ್ಯ ಸುನಿಲಕುಮಾರ, ನಿಶಾ ಗುರುನಾಥ ಮತ್ತು ಸಂತೋಷ ಚಂದ್ರಶೇಖರ 615/98.40, ಅಸಿಫ ಯಾದುಲ್ಲಾ, ಸಾಕ್ಷಿ ಅನಿಲಕುಮಾರ ಮತ್ತು ವಿಜಯಲಕ್ಷ್ಮಿ ?? ಕಾಮಶೆಟ್ಟಿ 613/98.08, ವಿಕ್ರಮ ರಮೇಶ 612/97.92, ನಿಸರ್ಗ ಮಹೇಶ 611/97.76, ಅಕ್ಷತಾ ಮಹಾದೇವ 608/97.28, ಆರತಿ ಸುಭಾಷ 607/97.12, ನಿಬ್ರಾಸ ಕವಲ್ ನಯೀಮಪಾಶಾ, ರುಮಾನಾ ಬೇಗಂ ಮುಸ್ತಫಾ ಮತ್ತು ಅಕ್ಷತಾ ರವಿ 605/96.80, ಕ್ರಿಶಕುಮಾರ ಅನಿಲ 603/96.48, ದರ್ಶನ ಅಶೋಕುಮಾರ, ಶಾಯಿಸ್ತಾ ಪರವೀನ ಶಾದುಲ್ಲಾ ಪಟೇಲ, ರೋಹಿತ ರವೀಂದ್ರ ಮತ್ತು ಶಶಾಂಕ ವೀರೇಂದ್ರ 602/96.32, ಓಂಪ್ರಕಾಶ ನಾರಾಯಣ ಮತ್ತು ಭೂಮಿಕಾ ಲಕ್ಷ ??ಣ 601/96.16, ಸಿದ್ದೇಶ್ವರ ಸಂತೋಷ ಮತ್ತು ಸಾಯಿನಾಥ ಶಂಕರ 600/96.00 ಪ್ರತಿಶತ ಅಂಕ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

ವಿದ್ಯಾರ್ಥಿಗಳ ಜೀವನದಲ್ಲಿ ಹತ್ತನೇ ತರಗತಿ ಶಿಕ್ಷಣ ಅತ್ಯಂತ ಮಹತ್ವದ ಘಟ್ಟ. ಈ ಹಂತದಲ್ಲಿ ಅವರು ಪಡುವ ಪರಿಶ್ರಮ ಮತ್ತು ತೆಗೆದುಕೊಳ್ಳುವ ನಿರ್ಧಾರ ವಿದ್ಯಾರ್ಥಿಗಳ ಜೀವನಕ್ಕೆ ಭದ್ರ ಬುನಾದಿಯನ್ನು ನೀಡುತ್ತದೆ ಮತ್ತು ಬೌದ್ಧಿಕ ಬೆಳವಣಿಗೆಗೆ ಅವಕಾಶಗಳನ್ನು ತೆರೆದಿಡುವ ಮೂಲಕ ಅವರ ಸರ್ವಾಂಗೀಣ ವಿಕಾಸಕ್ಕೆ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ. ಇದರ ಮೂಲಕ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ಶ್ರೀ ವಾಯ್.ಮಾಧವರಾವ ವಿದ್ಯಾರ್ಥಿಗಳಿಗೆ ಹಿತನುಡಿಯನ್ನು ತಿಳಿಸುತ್ತ ಅವರ ಸಾಧನೆಗೆ ಹರ್ಷ ವ್ಯಕ್ತಪಡಿಸಿರುತ್ತಾರೆ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಸ್ತಾನವಲಿ, ಮುಖ್ಯೋಪಾಧ್ಯಾಯರಾದ ಶ್ರೀ ನೀಲಂಗೆ ಸರ್ ಅವರು ಕೂಡಾ ವಿದ್ಯಾರ್ಥಿಗಳ ಅಮೋಘ ಸಾಧನೆಗೆ ವಿದ್ಯಾರ್ಥಿಗಳಿಗೂ ಹಾಗು ಪಾಲಕ ವೃಂದದವರಿಗೂ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ.

ಡೈಮಂಡ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಶೇಖ್ ಗೌಸಿಯಾ, ಮುಖ್ಯ ಆಡಳಿತಾಧಿಕಾರಿಗಳಾದ ಅಶ್ವಿನ ಭೋಸ್ಲೆ, ಆಡಳಿತಾಧಿಕಾರಿಗಳಾದ ರಾಮ ಕನಸೆ, ಸುಜಾತಾ ಪಾಟೀಲ, ಸ್ವಪ್ನಾಲಿ ಖಾಶೆಂಪುರೆ ಹಾಗೂ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿರುತ್ತಾರೆ.

ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ | ಯಾದಗಿರಿ | ಭಾನುವಾರ 04-05-2025 | 5

# ಪದವಿ ಪೂರ್ವ ಉಪನಿರ್ದೇಶಕರಾಗಿ ರುದ್ರಗೌಡ ಪಾಟೀಲ್ ಅಧಿಕಾರ ಸ್ವೀಕಾರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಗಿರಿಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಹೊಸ ಉಪನಿರ್ದೇಶಕರಾಗಿ ರುದ್ರಗೌಡ ಮಾಲಿ ಪಾಟೀಲ್ ಸಿಂಗನಳ್ಳಿ ಅವರ ಕಛೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ದೀರ್ಘಕಾಲದ ಅನುಭವ ಹೊಂದಿರುವ ರುದ್ರಗೌಡ ಮಾಲಿ ಪಾಟೀಲ ಅವರು ಮುಲತ ಶಹಾಪುರ ತಾಲೂಕಿನ ಶಿಂಗನಹಳ್ಳಿ ಗ್ರಾಮದವರಾದ ಇವರು ಯಾದಗಿರಿ ಜಿಲ್ಲೆಯ ವಿವಿಧ ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸತತ 29ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಅವರು, ಜಿಲ್ಲೆಯಲ್ಲಿ ಪದವಿ ಪೂರ್ವ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಬದ್ಧರಾಗಿದ್ದಾರೆ.

ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿ, ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ರುದ್ರಗೌಡ ಮಾಲಿ ಪಾಟೀಲ ಅವರು ಮಾತನಾಡುತ್ತಾ, "ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ತಕ್ಷಣ ಪ್ರಯತ್ನ ಕೈಗೊಳ್ಳಲಾಗುತ್ತದೆ. ಗುಣಮಟ್ಟದ ಶಿಕ್ಷಣ ಮತ್ತು ಶಿಸ್ತಿನ ಆಡಳಿತ ನಮ್ಮ ಗುರಿಯಾಗಿರುತ್ತದೆ" ಎಂದು ತಿಳಿಸಿದರು.

# ಮೊರಾರ್ಜಿ ದೇಸಾಯಿ ಪದವಿಪೂರ್ವ ವಸತಿ ವಿಜ್ಞಾನ ಕಾಲೇಜು: ಪ್ರಥಮ ಪಿಯುಸಿ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.03-ಕಲಬುರಗಿ ಜಿಲ್ಲೆಯಲ್ಲಿಕಾರ್ಯನಿರ್ವಹಿಸುತ್ತಿರುವ ಚಿತ್ತಾಪುರತಾಲೂಕಿನಗುಂಡಗುರ್ತಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು,ಚಿತ್ತಾಪುರ ತಾಲೂಕಿನ ನಾಗಾವಿ (ಉನ್ನತೀಕರಿಸಿದ) ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು ಹಾಗೂ ಅಫಜಲಪೂರ ತಾಲೂಕಿನ ಅರ್ಜುಣಗಿ (ಉನ್ನತೀಕರಿಸಿದ) ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಪ್ರಸಕ್ತ 2025-26ನೇ ಸಾಲಿಗೆ ಪ್ರಥಮ ಪಿಯುಸಿ (ಪಿ.ಸಿ.ಎಮ್.ಬಿ. ಮತ್ತು ಪಿ.ಸಿ.ಎಮ್.ಸಿ) ಪ್ರವೇಶ ಪಡೆಯಲುಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಸಮನ್ವಯಾಧಿಕಾರಿಗಳು (ಕಾಲೇಜು) ಅವರು ತಿಳಿಸಿದ್ದಾರೆ.

2024-25ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ತರಗತಿಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ /ಅಟಲ್ ಬಿಹಾರಿ ವಾಜೀಪೇಯಿ ವಸತಿ ಶಾಲೆಗಳಲ್ಲಿ /ಯಾವುದೇ ಶಾಲೆಯ ವಿದ್ಯಾರ್ಥಿಗಳು ಮತ್ತು ಈ ಹಿಂದೆ ಪಾಸು ಮಾಡಿರುವ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ತರಗತಿ ದಾಖಾಲಾತಿಗೆ ಅರ್ಜಿ ಸಲ್ಲಿಸಬಹುದಾಗಿದೆ.ವಿದ್ಯಾರ್ಥಿಗಳನ್ನು ಎಸ್.ಎಸ್.ಎಲ್.ಸಿ. ಅಂಕಗಳ ಮತ್ತು ಮೀಸಲಾತಿ ಆಧಾರದ ಮೇಲೆ ಅರ್ಹತಾ ಪಟ್ಟಿ ತಯಾರಿಸಿ ಪ್ರವೇಶ ನೀಡಲಾಗುತ್ತದೆ.

ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪೋಷಕರ ಹಾಗೂ ಹಿಂದುಳಿದ ವರ್ಗದ ಪ್ರ.ವರ್ಗ-1ರ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ 2,50,000 ರೂ.ಗಳು ಇರಬೇಕು. ಹಿಂದುಳಿದ ವರ್ಗದ 2ಎ, 2ಬಿ, 3ಎ ಮತ್ತು 3ಬಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ 1,00,000 ರೂ. ದೊಳಗಿರಬೇಕು. ಈಗಾಗಲೇ ಮೇ 3 ರಿಂದ ಅರ್ಜಿ ವಿತರಣೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ನಿಗದಿತ ಅರ್ಜಿ ನಮೂನೆಯನ್ನು ತಿತಿತಿ.ಇಡಿಜು. ಇಚಿಡಿ.ಟುಥಿ.ಟವೆಬ್‌ಸೈಟ್‌ದಿಂದ ಅಥವಾ ಎಲ್ಲಾ ವಸತಿ ಶಾಲೆ ಮತ್ತು ಕಾಲೇಜುಗಳಿಂದ ಪಡೆಯಬಹುದಾಗಿದೆ. ಅರ್ಜಿ ವಿತರಣೆಗೆ ಮೇ 14 ಕೊನೆಯ ದಿನವಾಗಿದೆ.

ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಗುಂಡಗುರ್ತಿ ಮೊರಾರ್ಜಿ ದೇಸಾಯಿ ಪದವಿಪೂರ್ವ ವಸತಿ ಕಾಲೇಜಿನ ಮೊಬೈಲ್ ಸಂಖ್ಯೆ 9483408131, 9972937300, 7411481767, 9900972383, ನಾಗಾವಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜಿನ ಮೊಬೈಲ್ ಸಂಖ್ಯೆ-9902568306, 9740538306, 9036605098 ಹಾಗೂ ಅರ್ಜುಣಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜಿನ ಮೊಬೈಲ್ ಸಂಖ್ಯೆ 9449906618, 9591792969ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಶಾಸಕ ವಿಜಯಾನಂದ ಕಾಶಪ್ಪನವರ ಸಿದ್ದಶ್ರೀ ಉತ್ಸವಕ್ಕೆ ಸಚಿವರಾಗಿ ಬರುತ್ತಾರೆ ಸಿದ್ದನಕೊಳ್ಳದ ಶ್ರೀಗಳು ಭವಿಷ್ಯ





ಮಲ್ಲಮ್ಮ ನುಡಿ ವಾರ್ತೆ

ಇಲಕಲ್-ತಾಲೂಕಿನ ಸಿದ್ದನಕೊಳ್ಳ ಮಠದ ನಿರಂತರ ದಾಸೋಹ ಮಠದ ಡಾ// ಶಿವಕುಮಾರ ಸ್ವಾಮೀಜಿ ಮುಂದಿನ ವರ್ಷದ ಸಿದ್ಧಶ್ರೀ ಉತ್ಸವಕ್ಕೆ ಹುನಗುಂದ ಮತಕ್ಷೇತ್ರದ ಶಾಸಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ವಿಜಯಾನಂದ ಕಾಶಪ್ಪನವರ್ ಸಚಿವರಾಗಿ ಬರಲಿದ್ದಾರೆ ಎಂದು ಶ್ರೀಗಳು ಭವಿಷ್ಯ ನುಡಿದರು ಸಿದ್ದಪ್ಪಜ್ಜನ ಪೂಜ್ಯರ ಪುಣ್ಯಾರಾಧನೆ ಕಾರ್ಯಕ್ರಮಕ್ಕೆ ಆಗಮಿಸಿ ಸಿದ್ದನಕೊಳ್ಳ ಬೆನಕನವಾರಿ ರಸ್ತೆ ನಿರ್ಮಾಣ ಅಡಿಗಲ್ಲು ಸಮಾರಂಭಕ್ಕೆ ಆಗಮಿಸಿದಾಗ ಶಾಸಕರಿಗೆ ಶ್ರೀಗಳು ಶ್ರೀಮಠದಿಂದ ಆಶೀರ್ವದಿಸಿ ಬರುವ ಸಿದ್ಧ ಶ್ರೀ ಉತ್ಸವ ಕಾರ್ಯಕ್ರಮ ಸಚಿವರಾಗಿ ಹೆಲಿಕಾಪ್ಟರ್ ನಲ್ಲಿ ಬರುತ್ತಿರಿ ಎಂದು ಆಶೀರ್ವದಿಸಿದರು.

ರಾಜಕಾರಣದಲ್ಲಿ ಚತುರರಾಗಿರುವ ನೀವು ಮುಂದಿನ ದಿನಮಾನದಲ್ಲಿ ರಾಜ್ಯದ ಚುಕ್ಕಾಣಿ ಹಿಡಿಯುವ ಎಲ್ಲಾ ಲಕ್ಷಣಗಳು ನಿಮ್ಮಲ್ಲಿ ಕಾಣಸಿಗುತ್ತವೆ ಎಂದು ಶಾಸಕರಿಗೆ ಹೇಳಿದರು ಸಿದ್ದನಕೊಳ್ಳ ಮಠದ ಪರಮ ಭಕ್ತರಾಗಿರುವ ನೀವು ಸಿದ್ದಪ್ಪಜಜ್ಜನ ಆಶೀರ್ವಾದ ನಿಮ್ಮ ಮೇಲೆ ಸದಾ ಇರಲಿದೆ ಎಂದು ಶ್ರೀಗಳು ಹೇಳಿ ಆಶೀರ್ವದಿಸಿದರು..

# ಗೋಡಿಹಾಳ್ ಗ್ರಾಮದಲ್ಲಿ ನಡೆಯುತ್ತಿರುವ NSS ಶಿಬಿರದ ಸಮಾರೋಪ ಸಮಾರಂಭ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ವಡಗೇರಾ ತಾಲ್ಲೂಕಿನ ಬನಸಿರಿ ಪದವಿ ಮಹಾ ವಿದ್ಯಾಲಯ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ಸಂಯುಕ್ತ ಆಶ್ರಯದಲ್ಲಿ ದತ್ತು ಗ್ರಾಮ ಗೋಡಿಹಾಳ ರಾಷ್ಟ್ರೀಯ ಸೇವಾ ಯೋಜನೆ 7 ನೇ ದಿನದ ಸಮಾರೋಪ ಸಮಾರಂಭ ಕಾರ್ಯಕ್ರಮ ನೆರವೇರಿತು ಈ ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀ ಗೌರಿಶಂಕರ ಹಿರೇಮಠ ಗೋಡಿಹಾಳ್ ದಿವ್ಯ ಸಾನಿಧ್ಯ ವಹಿಸಿಕೊಂಡಿದ್ದರು ಮುಖ್ಯ ಅತಿಥಿಗಳಾಗಿ ಶ್ರೀ ತಮ್ಮನಗೌಡ ಬಿರಾದರ್ ಪೊಲೀಸ್ ಪಾಟೀಲ್ ಗೋಡಿಹಾಳ್ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ನಮ್ಮ ಗ್ರಾಮದ ಜನತೆಗೆ ನವ ಉಲ್ಲಾಸ ಮತ್ತು ಶ್ರಮದ ಜೊತೆಗೆ ಉಪನ್ಯಾಸ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಗರಿ ಚಿಗುರಿದವು ಇಂತಹ ಚಟುವಟಿಕೆಗಳು ಜನರಿಗೆ ಉತ್ಸಾಹ ಮತ್ತು ಬದಲಾವಣೆ ತಂದು ಕೊಡುತ್ತೇವೆ ಎಂದರು ಜೊತೆಗೆ ನಮ್ಮ ಗ್ರಾಮದ ಮಹಿಳೆಯರು ಅವರ ಜೊತೆ ಸೇರಿ ಜಾನಪದ ಹಾಡುಗಳು ಹಾಡಿ ಮಕ್ಕಳೊಂದಿಗೆ ಸೇರಿ ಅವರ ಸಾಂಸ್ಕೃತಿಕ ಚಟುವಟಿಕೆಗೆ ಮೆರಗು ತಂದು ಕೊಟ್ಟರು ಇದು ನಮ್ಮೂರ ಜಾತ್ರೆಯಂತೆ ಭಾ ಸವಾಯಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು ಗ್ರಾಮದ ಮುಖಂಡರಾದ ಶ್ರೀ ಶರಣಪ್ಪ ಗೌಡ ಪೊಲೀಸ್ ಪಾಟೀಲ್ ಮಾತನಾಡಿ ಎನ್ ಎಸ್ ಎಸ್ ಸ್ವಯಂಸೇವಕರ ಸೇವೆ ಶ್ಲಾಘನೀಯ ಎಂದರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಶುಭಾಷ್ ಸಾಹುಕಾರ್ ಶ್ರೀ ದೇವೇಂದ್ರಪ್ಪ ಗೌಡ ಮಾಲಿಕ್ ಪಾಟೀಲ್ ಶ್ರೀ ಶರಣಪ್ಪ ಗೌಡ ಹತ್ತಿಕುಣಿ ಶ್ರೀ ಬಸವರಾಜಪ್ಪ ಗೌಡ ಬಣಕಲ್ ಹಾಗೂ ಶ್ರೀ ನಾಗರೆಡ್ಡಿ ನಾಯ್ಕಲ್ ಈ ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ಶ್ರೀ ನಾನಾ ಗೌಡ ಮದುರಕಲ್ ಎಲ್ ಎನ್ ರೆಡ್ಡಿ ಯಲ್ಲಪ್ಪ ಸರ್ , ಮಲ್ಲಾರೆಡ್ಡಿ ಜೆಡಿ ಕಾಲೇಜಿನ ಪ್ರಾಂಶುಪಾಲರು ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದರು ಗೋಡ್ಯಾಳ ಗ್ರಾಮದ ಸಮಸ್ತ ಜನರಿಗೆ ಅಭಿನಂದನೆಗಳು ಮತ್ತು ಶ್ರೀ ಗೌರಿಶಂಕರ ಹಿರೇಮಠ ಇವರ ಸಹಕಾರ ತುಂಬಾ ಮರೆಯಲಾಗದ ಸಂದರ್ಭ ಎಂದು ನುಡಿದರುಎನ್‌ಎಸ್‌ಎಸ್ ಅಧಿಕಾರಿಗಳಾದ ಶ್ರೀ ದೇವೇಂದ್ರಪ್ಪ ಪಿ ಸಜ್ಜನ್ ಮಾಜಿ ಎನ್‌ಎಸ್‌ಎಸ್ ವಿದ್ಯಾರ್ಥಿಯಾದ ಭರಮಣ್ಣ ಗೋಡಿಹಾಳ ಹಾಗೂ ಎನ್ ಎಸ್ ಎಸ್ ಸ್ವಯಂಸೇವಕರು ಭಾಗವಹಿಸಿದ್ದರು.

## CITATION

**IN THE COURT OF THE ADDL. CIVIL JUDGE AND JMFC., AT HUMNABAD**

**CRL. MISC. No.531/2025**

Petitioners:-

P-1. Sharadabai W/o Ramu Age:43 years Occu: Household R/o Village Govind thanda tq:chitguppa Dist:bidar Now at khanapur Kalaburgi.

P-2 jalibai W/o jagannath age:40 years occu:household R/o kalaburgi.

P-3 manik Rao S/o late ratan singh age 42 years.

P-4 kavita W/o manik Age:41 years R/o Village Chowki thanda Tq:chitguppa

P-5 murahari W/o late Rathnu Age 38 years R/o Village Govind thanda

P-6 pashuram S/o late Rathnu R/o Village Govind Thanda Tq:chitguppa.

Respondent:-

The registrar of birth and death through the Tahasildar Chitguppa.

Sub:-petition U/Sec 13(3) of birth and death Rgistration Act 1969

Whereas the above named petitioner has filed the petition under section 13(3) of Birth and Death Registration Act 1969 praying this Hon'ble court to issue Death certificate daughters of petitioner No. 1,2,4 and sons of petitioner No.3,5,6 namely; Late Ratnu S/o Lalu who died on 28-11-1993 R/o Village Govind Thanda Tq:chitguppa Dist:Bidar. The petitioner claiming the death certificate of said Ratnu for transfer of property and other official purpose and home record.

Therefore, it is hereby proclaimed that if any person or persons have got any objection in this regard, may he/they May approach to this Honorable court on 30-05-2025 at 11.00 AM in person or authorized pleader to answer such claim otherwise the matter will be heard and determined in your absence as per law.

Given under my hand and seal of he court, this the 25-04-205

//By order of the court//
Chief Ministerial Officer,
Addl.Civil Judge and JMFC
Humnabad.

## PAPER PUBLICATION

**IN THE COURT OF SENIOR CIVIL JUDGE AT HUMNABAD**

**O.S No.61/2018**

Plaintiffs :Neelkantappa and others.

//Vs//

Defendants : Kannareddy & other

Sub:Suit for declaration of ownership etc.

To,

D 3 a) Smt. Sharnamma W/o Late Gundappa age:34 Years, Occu:Hosehold, D3b) Renuka @ Yashodha D/o Gundappa Minor U/g D 3 a) Sharnamma.

Both R/o Bannalli Tq:Chitguppa Dist:Bidar.

Whereas, the plaintiff have filed the suit against the defendants for declaration of ownership have taken steps your appearance in the proceeding several times but summons could not be served. Therefore you are hereby summoned to appear before this Hon'ble court in person or through your pleader duly instructed and able to answer all material questions relating to the claim of the plaintiff on the day of 17-06-2025 at 10.30 AM answer the claim of the plaintiff and you are directed to produce all such documents upon which you intend rely in support of your defense.

Take notice that in default of your appearance on the day before mentioned the suit will be heard and determined in your absence.

Given under my hand and the seal of the court, on 25th day of April-2025.

//By order of the Court//
C.M.O
Senior Civil Judge & JMFC
Court Humnabad

ಅಂಬೇಡ್ಕರ್ ವಿಚಾರ ಯಾತ್ರೆ ಕಾರ್ಯಕ್ರಮ.

# ಕಾಂಗ್ರೆಸ್ ಸುಡುವ ಮನೆ ಎಂದಿದ್ದು ಅಂಬೇಡ್ಕರ್ ವಿಚಾರ ಸಂಕಿರಣ...



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಕಾಂಗ್ರೆಸ್ ಒಂದು ಸುಡುವ ಮನೆ ಎಚ್ಚರ ಎಂದು ಬಿಜೆಪಿ ಹೇಳಿಲ್ಲ, ಹೇಳಿದ್ದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಸ್ವತಃ ಹೇಳಿದ್ದರು ಎಂದು ರಾಜ್ಯ ಅಂಬೇಡ್ಕರ್ ವಿಚಾರ ಯಾತ್ರೆ ಉಸ್ತುವಾರಿ ಹಾಗೂ ಬಿಜೆಪಿ ರಾಜ್ಯ ಎಸ್.ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ ಹೇಳಿದರು.

ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿಆಯೋಜಿಸಿದ್ದ ಅಂಬೇಡ್ಕರ್‌ಯಾತ್ರಾಕಾರ್ಯಕ್ರಮದಲ್ಲಿ, ಮಾತನಾಡಿದ ಅವರು ಕಾಂಗ್ರೆಸ್ ಒಂದು ಸುಡುವ ಮನೆ ಎಚ್ಚರವೆಂದು ಬಾಬಾ ಸಾಹೇಬರು ಹೇಳಿದ್ದಾರೆ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಗುಡುಗಿದರು.1948 ಏ.25 ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ರಾಷ್ಟ್ರೀಯ ಸಮ್ಮೇಳನದಲ್ಲಿ ಹೇಳಿದ್ದರು ಆದರೆ ಕಾಂಗ್ರೆಸ್ ನಾಯಕರು ಅಂಬೇಡ್ಕರ್ ಬದುಕಿದ್ದಾಗ ಕಡೆಗಣಿಸಿದರು, ಅವಮಾನಿಸಿದರು, ನಿರ್ಲಕ್ಷಿಸಿದರ, ರಾಜಕೀಯವಾಗಿ ಮುಗಿಸಲು ಹೊರಟಿದ್ದರು.ಅಂಬೇಡ್ಕರ್‌ಕಾಲವಾದ ನಂತರ ಲಜ್ಜೆಗೇಡಿ ಕಾಂಗ್ರೆಸ್ ನಾಯಕರು ಯಾವುದೇ ಸಂಕೋಚ, ಮಾನವಿಲ್ಲದೆ ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮತ್ತು ಕಲಬುರ್ಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ ಮಾತನಾಡಿದ ಅವರು ಅಂಬೇಡ್ಕರ್‌ರನ್ನು ಸಂವಿಧಾನ ರಚನಾ ಸಮಿತಿ ಚುನಾವಣೆಯಲ್ಲಿ ನೆಹರು ಸೋಲಿಸಿದರು. ಅಂಬೇಡ್ಕರ್ ಬದುಕಿದ್ದಾಗ ಹೆಜ್ಜೆ ಹೆಜ್ಜೆಗೆ ನೋವು ಕೊಟ್ಟರು, ಇದೀಗ ಅಂಬೇಡ್ಕರ್ ಹಾಗೂ ಸಂವಿಧಾನ ಹೆಸರು ಹೇಳಿಕೊಂಡು ರಾಜ-ಕಾರಣ ಮಾಡುತ್ತಿದ್ದಾರೆ ಬಿಜೆಪಿ ಎಂದೂ ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ಅಗೌರವ ತೋರಿಲ್ಲ ಎಂದು ಹೇಳಿದರು...

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಬಸವರಾಜವಿಭೂತಿಹಳ್ಳಿಮಾತನಾಡದ ಅವರು ಅಂಬೇಡ್ಕರ್‌ರನ್ನು ಸಂವಿಧಾನ ರಚನಾ ಸಮಿತಿ ಚುನಾವಣೆಯಲ್ಲಿ ನೆಹರು ಸೋಲಿಸಿದರು. ಅಂಬೇಡ್ಕರ್ ಬದುಕಿದ್ದಾಗ ಹೆಜ್ಜೆ ಹೆಜ್ಜೆಗೆ ನೋವು ಕೊಟ್ಟರು, ಇದೀಗ ಅಂಬೇಡ್ಕರ್ ಹಾಗೂ ಸಂವಿಧಾನ ಹೆಸರು ಹೇಳಿಕೊಂಡು ರಾಜ-ಕಾರಣ ಮಾಡುತ್ತಿದ್ದಾರೆ. ಬಿಜೆಪಿ ಎಂದೂ ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ಅಗೌರವ ತೋರಿಲ್ಲ ಎಂದು ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪುರ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಯುವ ಮುಖಂಡ ಮಹೇಶರಡ್ಡಿ ಮುದ್ನಾಳ, ಖಂಡಪ್ಪ ದಾಸನ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ ಮತ್ತು ಪರುಶುರಾಮ ಕುರಕುಂದಿ ಹಾಗೂ ಮೇಲಪ್ಪ ಗುಳಗಿ, ಜಿಲ್ಲಾ ವಕ್ತಾರ ಹಣಮಂತ ಇಟಗಿ, ಜಿಲ್ಲಾ ಎಸ್.ಸಿ ಮೋರ್ಚಾ ಜಿಲ್ಲಾಧ್ಯಕ್ಷ ಭೀಮಾಶಂಕರ ಬಿಲ್ಲವ, ಜಿಲ್ಲಾ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಆರ್ ಸಾಹುಕಾರ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುನಿತಾ ಚೌವ್ಹಾಣ್, ಎಸ್.ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದಪ್ಪ ರಾಮಸಮುದ್ರ, ಒಬಿಸಿ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಕಂದುಕುರ, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ರವಿ ಮುದ್ನಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು....

# ರಾಯಚೂರ ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೋಹಾಪಾತ್ರ ಅವರಿಂದ ಸಿಟಿ ಸಂಚಾರ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 03- ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಾಪಾತ್ರ ಅವರು ಮೇ 3ರಂದು ರಾಯಚೂರ ನಗರದ ಪರಿವೀಕ್ಷಣೆ ನಡೆಸಿದರು.

ಬೆಳಗ್ಗೆ 10 ಗಂಟೆಗೆ ಸಿಟಿ ಸಂಚಾರ ಆರಂಭಿಸಿದ ಆಯುಕ್ತರು ಮಧ್ಯಾಹ್ನವರೆಗೆ ನಿರಂತರವಾಗಿ ನಗರ ಸುತ್ತಾಟ ನಡೆಸಿದರು. ಬಿರುಬಿಸಿಲು ಲೆಕ್ಕಿಸದೇ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಸಿಟಿ ಸಂಚಾರ ಆರಂಭಿಸಿದ ಆಯುಕ್ತರು, ಆಯಾ ಕಡೆಗಳಲ್ಲಿನ ಸಮಸ್ಯೆಗಳನ್ನು ಖುದ್ದು ತಾವೇ ಕಂಡುಕೊಂಡರು.

ಸಿಟಿ ಸಂಚಾರ ವೇಳೆ ಕಂಡು ಬಂದ ನೂನ್ಯತೆಗಳ ಬಗ್ಗೆ ಪರಿಶೀಲಿಸಿದರು. ಆಯಾ ಕಡೆಗಳಲ್ಲಿ ಕಂಡು ಬಂದ ಸಮಸ್ಯೆಗಳ ಬಗ್ಗೆ ಸ್ಥಳದಲ್ಲಿದ್ದ ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಚರ್ಚಿಸಿದರು.

ನಗರ ಪರಿವೀಕ್ಷಣೆ ವೇಳೆಯಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಸರಿಪಡಿಸಲು ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳ ತಂಡಕ್ಕೆ ಗಡುವು ವಿಧಿಸಿದರು. ರಾಯಚೂರ ನಗರ ತನ್ನದೇ ಐತಿಹಾಸಿಕ ವಿಶೇಷತೆಯನ್ನು ಹೊಂದಿದೆ. ಇದನ್ನುಪ್ರತಿಯೊಬ್ಬರುಅರಿಯಬೇಕು. ನಗರ ಸೌಂದರ್ಯಕ್ಕೆ ಒತ್ತು ಕೊಡಬೇಕು. ಕೋಟೆಕೊತ್ತಲು, ಗುಡ್ಡದ ಪ್ರದೇಶದಲ್ಲಿರುವ ರಾಯಚೂರ ನಗರಕ್ಕೆ ಯಾ-ರೇ ಬರಲಿ ಅವರು ನಗರದ ಬಗ್ಗೆ ಉತ್ತಮವಾದ ಅಭಿಪ್ರಾಯ ಹೊಂದುವ ರೀತಿಯಲ್ಲಿ ನಗರದ ಸೌಂದರ್ಯೀಕರಣಕ್ಕೆ ಒತ್ತು ಕೊಡಬೇಕಾಗಿರುವುದು ನಮ್ಮೆಲ್ಲರ ಆದ್ಯ ಕಾರ್ಯವಾಗಿದೆ ಎಂದು ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಆಯುಕ್ತರಾದ ಜುಬಿನ್ ಅವರು ಮನವರಿಕೆ ಮಾಡಿದರು.

ಸಾರ್ವಜನಿಕರಲ್ಲಿ ಮನವಿ: ಸಿಟಿ ಸಂಚಾರ ವೇಳೆ ತಮ್ಮನ್ನು ಭೇಟಿ ಮಾಡಿದ ಸಾರ್ವಜನಿಕರೊಂದಿಗೆ ಆಯುಕ್ತರಾದ ಜುಬಿನ್ ಅವರು ಆಪ್ತವಾಗಿ ಮಾತನಾಡಿದರು. ಎಲ್ಲೆಂದರಲ್ಲಿ ಕಸ ಬೀಸಾಕಬೇಡಿ. ನಿಗದಿಪಡಿಸಿದ ಸ್ಥಳದಲ್ಲಿ ಕಸವನ್ನು ಹಾಕಿ. ನಗರ ಸೌಂದರ್ಯ ಶುಚಿತ್ವವು ಬರೀ ಪಾಲಿಕೆಯ ಕಾರ್ಯವಲ್ಲ; ಸಾರ್ವಜನಿಕರು ಸಹ ಸಹಕರಿಸಬೇಕು. ಎಲ್ಲೆಂದರದಲ್ಲಿ ಮಲ ವಿಸರ್ಜನೆ ಮಾಡಬಾರದು. ಶುಚಿತ್ವಕ್ಕೆ ಸಾಕಷ್ಟು ಒತ್ತು ಕೊಡಬೇಕು. ನಗರದ ಸೌಂದರ್ಯೀಕರಣದ ಬಗ್ಗೆ ಏನಾದರು ಸಲಹೆಗಳಲ್ಲಿದ್ದಲ್ಲಿ ಸಾರ್ವಜನಿಕರು ತಮ್ಮನ್ನು ಕಂಡು ಮಾತನಾಡಬಹುದು. ಎಲ್ಲರೂ ಸೇರಿ ರಾಯಚೂರ ನಗರದ ಸ್ವಚ್ಛತೆಯ ಬಗ್ಗೆ ಗಮನ ಹರಿಸೋಣ ಎಂದು ಇದೆ ವೇಳೆ ಆಯುಕ್ತರಾದ ಜುಬಿನ್ ಅವರು ಮನವಿ ಮಾಡಿದರು.

# ಮೇ 5 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.03-ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದಲ್ಲಿ ಬರುವ ಕೆಳಕಂಡ ಫೀಡರಿನ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯಕೈಗೊಂಡಿರುವ ಪ್ರಯುಕ್ತ ಇದೇ ಮೇ 5 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ ಸರಬರಾಜು ಇರುವುದಿಲ್ಲ. ಆದ್ದರಿಂದ ಸದರಿ ಉಪ-ವಿತರಣಾ ಕೇಂದ್ರದ ನೃಪತುಂಗಾ ಫೀಡರ ಮೇಲೆ ಬರುವ ಎಲ್ಲಾ ಗ್ರಾಮಗಳು ಮತ್ತು ಇತರೆ ಸುತ್ತಮುತ್ತಲಿನ ಗ್ರಾಮಗಳ ಎಲ್ಲಾ ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಗ್ರಾಮೀಣ ವಿಭಾಗ-1ರ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

ದಕ್ಷಿಣ ವಿದ್ಯುತ್ ವಿತರಣಾ ಕೇಂದ್ರ: ಎಫ್-4 ನೃಪತುಂಗಾ ಫೀಡರಿನ ನಂದಿಕೂರ, ನಂದಿಕೂರ ತಾಂಡಾ, ಕೆಸರಟಗಿ, ಕೆಸರಟಗಿ ತಾಂಡಾ ಉದನೂರ, ಉದನೂರ ತಾಂಡಾ ಹಾಗೂ ಕೂಟನೂರ(ಡಿ).



ಹುಮನಾಬಾದ್ : ಚಿಟಗುಪ್ಪ ತಾಲೂಕಿನ ವರದಿಗಾರ ರಾಜಕುಮಾರ್ ಆರ್. ಹಡಪದಗೆ ಬೆಂಗಳೂರಿನ ಪ್ರಗತಿ ಮೀಡಿಯಾ ಸಂಸ್ಥೆಯಿಂದ ಗ್ಲೋಬಲ್ ಐಕಾನಿಕ ಎಕ್ಸಲೆನ್ಸ್ ಪ್ರಶಸ್ತಿ ಒಲಿದು ಬಂದ ಹಿನ್ನಲೆಯಲ್ಲಿ ಪಟ್ಟಣದ ಖಾಸಗಿ ಕಚೇರಿಯಲ್ಲಿ ಶನಿವಾರ ಪತ್ರಕರ್ತ ರಾಜಕುಮಾರ್ ಆರ್. ಹಡಪದಗೆ ಉದ್ಯಮಿ, ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯ ಸನ್ಮಾನಿಸಿದರು. ಪರಿಸರವಾದಿ ಶೈಲೇಂದ್ರ ಕಾವಡಿ, ಸಂಜೀವನ ಭೋಸ್ಲೆ, ದಯಾನಂದ ಮೇತ್ರಿ, ಮಲ್ಲಿಕಾರ್ಜುನ ರೆಡ್ಡಿ, ರಾಜು ಪೂಜಾರಿ ಸೇರಿ ಅನೇಕರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# 05 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಬೇಸಿಗೆ ಶಿಬಿರ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 03: 2025–26 ನೇ ಸಾಲಿನ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ವಿವಿಧ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಲು 05 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬಾಲಭವನ ಸೊಸೈಟಿ, ಬೆಂಗಳೂರು ಹಾಗೂ ಜಿಲ್ಲಾ ಬಾಲಭವನ ಸಮಿತಿ ರಾಯಚೂರು ಇವರ ವತಿಯಿಂದ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರವು 15 ದಿನಗಳ ಕಾಲ ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ನಡೆಯಲಿದೆ. ಈ ಶಿಬಿರದಲ್ಲಿ ವಿವಿಧ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಾದ ಯೋಗ, ಚಿತ್ರಕಲೆ, ಸಮೂಹ ನೃತ್ಯ, ಸಮೂಹ ಸಂಗೀತ, ಮೆಹಂದಿ ಚಟುವಟಿಕೆಗಳು ನಡೆಯಲಿವೆ. ಈ ಕಾರ್ಯಕ್ರಮಕ್ಕೆ 05 ರಿಂದ 16 ವರ್ಷದ ಒಳಗಿನ ಆಸಕ್ತಿಯುಳ್ಳ ಸರಕಾರಿ ಶಾಲೆ ಸೌಲಭ್ಯ ವಂಚಿತ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸಲು ಮೇ 07 ರಂದು ಮಧ್ಯಾಹ್ನ 1.30 ಗಂಟೆಯೊಳಗೆ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ಇವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಚಟುವಟಿಕೆಯಲ್ಲಿ ಭಾಗವಹಿಸಲು ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ದೂರವಾಣಿ ಸಂಖ್ಯೆ 8151807308 ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ

ಬಳ್ಳಾರಿ, ಮೇ 03–ಸಿಪೆಟ್ ಮೈಸೂರು ಕಾಲೇಜ್ ನಲ್ಲಿ ಪಿಯುಸಿ ಉತ್ತೀರ್ಣ ಮತ್ತು ಅನುತ್ತೀರ್ಣರಾದವರಿಗೆ ಉಚಿತ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಆಸಕ್ತ ವಿದ್ಯಾರ್ಥಿಗಳು ನೋಂದಾಯಿಸಿಕೊಳ್ಳಬಹುದಾಗಿದೆ.

ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ ಸಿಪೆಟ್ ಸಂಸ್ಥೆಯು ಭಾರತ ಸರ್ಕಾರದ ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದೆ.

ಸಂಸ್ಥೆಯು ದೇಶದ ಪಾಲಿಮರ್, ಪೆಟ್ರೋಕೆಮಿಕಲ್ಸ್, ಪ್ಲಾಸ್ಟಿಕ್ಸ್ ಕೈಗಾರಿಕೆಗಳ ಕೌಶಲ ಬೇಡಿಕೆಗೆ ಅನುಗುಣವಾಗಿ ಮಾನವ ಸಂಪನ್ಮೂಲಕ್ಕೆ ಶೈಕ್ಷಣಿಕ ತರಬೇತಿ ನೀಡಲಾಗುತ್ತಿದೆ ಮತ್ತು ಸಿಪೆಟ್ ಕರ್ನಾಟಕದ ವಿದ್ಯಾರ್ಥಿಗಳು ಪಾಲಿಮರ್ ಕೈಗಾರಿಕಾ ವಲಯದಲ್ಲಿ ಜಾಗತಿಕವಾಗಿ ಗುರುತಿಸಲ್ಪಟ್ಟಿದ್ದಾರೆ.

ಹೆಚ್ಚಿನ ಮಾಹಿತಿಗೆ ದೂ.0821–2510618 ಅಥವಾ ಮೊ.9480253024, 9791431827 ಗೆ ಸಂಪರ್ಕಿಸಬಹುದು.

ರಾಜ್ಯದ ವಿದ್ಯಾರ್ಥಿಗಳು ಈ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದ ಪ್ರಯೋಜನ ಪಡೆದು ತಮ್ಮ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬಹುದು ಎಂದು ಸಿಪೆಟ್ ಸಂಸ್ಥೆಯ ಪ್ರಿನ್ಸಿಪಾಲ್ ನಿರ್ದೇಶಕರು ಮತ್ತು ಮುಖ್ಯಸ್ಥರಾದ ಶ್ರೀಕಾಂತ್ ಶಿರಾಲಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೂತನ ಗ್ರಾಮ ಆಡಳಿತಾಧಿಕಾರಿಗಳಿಗೆ ತರಬೇತಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ, ಮೇ.3–ಕಲಬುರಗಿ ಜಿಲ್ಲೆಗೆ ಹೊಸದಾಗಿ ನೇಮಕವಾದ 60 ಜನ ಗ್ರಾಮ ಆಡಳಿತ ಅಧಿಕಾರಿಗಳಿಗೆ ಶುಕ್ರವಾರ ಇಲ್ಲಿನ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ತರಬೇತಿ ಆಯೋಜಿಸಲಾಗಿತ್ತು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ತರಬೇತಿ ಕಾರ್ಯಕ್ರಮ ಉದ್ಘಾಟಿಸಿ, ಶಿಬಿರಾರ್ಥಿಗಳಿಗೆ ಕಂದಾಯ ಇಲಾಖೆಯಲ್ಲಿ ಸೇವೆಗಳನ್ನು ಸಾರ್ವಜನಿಕರಿಗೆ ಹೇಗೆ ತಲುಪಿಸಬೇಕು ಎಂದು ತಿಳಿಸುತ್ತಾ ಕರ್ತವ್ಯ ನಿಷ್ಠೆ ಮೆರೆಯುವಂತೆ ನೌಕರರಿಗೆ ತಿಳಿಸಿದರು.

ಸಹಾಯಕ ಆಯುಕ್ತೆ ಸಾಹಿತ್ಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿ ರಾಮಚಂದ್ರಗಡದ್, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಶಿವಪ್ರಭು ಹಿರೇಮಠ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ನಾರಾಯಣಪುರ ಪೊಲೀಸ್ ಠಾಣೆಯಲ್ಲಿ ಇತ್ತೀಚಿಗೆ ನಡೆದ ಕೊಲೆ ಪ್ರಕರಣ ಹೊಸ ಟ್ವಿಸ್ಟ್



(ಶಿವು ರಾಠೋಡ)

ಮಲ್ಲಮ್ಮ ನುಡಿ ವಾರ್ತೆ

**ದಕ್ಷ ಅಧಿಕಾರಿ ರಾಜಶೇಖರ್ ರಾಠೋಡ ಪಿ.ಎಸ್.ಐ ನಾರಾಯಣಪುರ ಅವರ ವಿರುದ್ಧ ಶವ ಬಿಟ್ಟು ಪ್ರತಿಭಟನೆ ಮಾಡಿ ಸುಳ್ಳು ಆರೋಪ ಮಾಡುತ್ತಾರೆ.**

ನಾರಾಯಣಪುರ ಪೊಲೀಸ್ ಠಾಣೆ ವ್ಯಾಪ್ತಿಯ ಜೋಗಂಡಬಾವಿ ಗ್ರಾಮದಲ್ಲಿ ಇತ್ತೀಚಿಗೆ ನಡೆದ ಕೊಲೆ ಪ್ರಕರಣ ಹೊಸ ಟ್ವಿಸ್ಟ್ ಸಿಕ್ಕಿದೆ .

ಸೂಕ್ಷ್ಮವಾಗಿ ಕೊಲೆ ಪ್ರಕರಣದ ತನಿಖೆಯನ್ನು ಕೈಗೊಂಡ ಪೊಲೀಸ್ ಯಾದಗಿರಿ ಎಸ್‌ಪಿ ಆದೇಶದಂತೆ ಸಿಪಿಐ ರವಿಕುಮಾರ್ ಹುಣಸಗಿ ವೃತ್ತ ಇವರ ತನಿಖೆ ಕೈಗೊಂಡಾಗ.

ಮೊದಲು ಮೃತ ವ್ಯಕ್ತಿಯ ಹೆಂಡತಿಯಾದ ರೇಣುಕಮ್ಮ ಗಂಡ ಗೌಡಪ್ಪ ಚವನಬಾವಿ ಸಾ. ಜೋಗಂಡಬಾವಿ ಅವರು ನೀಡಿದ ದೂರಿನ ಮೇರೆಗೆ ದಿನಾಂಕ್ 22 –4 – 2025 ರಂದು ಆರೋಪಿತರಾದ ನೀಲಪ್ಪ ತಂದೆ ಯಮನಪ್ಪ ಹಾಗೂ ಇನ್ನಿತರರು ಸಾ. ಜೋಗಂಡಬಾವಿ ಹಳೆಯ ವೈರತ್ವದ ವಿಚಾರವಾಗಿ ಪ್ರಕರಣ ದಾಖಲಿಸಿದರು .

ಇದರ ತನಿಖೆ ಮುಂದುವರೆಸಿದ ತನಿಖಾ ಅಧಿಕಾರಿಗಳು ನಿಜ ಘಟನೆಯನ್ನು ಅರಿತು ಕೊಂಡಾಗ ದಿಗ್ಭ್ರಮ ಒಳಪಡುತ್ತಾರೆ .

ಅವನೇಗೆ ಅಂದರೆ ಗೌಡಪ್ಪನ ಅಕ್ಕನ ಮಗನಾದ ಸರಿಸುಮಾರು 14 ವರ್ಷದ ಬಾಲಕ.. (ಹೆಸರು ನಮೂದಿಸುವುದಿಲ್ಲ) ಬಡಿಗೆಯಿಂದ ತಲೆಹಿಂಬದಿಯಲ್ಲಿ ಹೊಡೆದಿರುತ್ತಾನೆ. ಈ ಪ್ರಕರಣವು ಪೊಲೀಸ್ ಕೆಂಭಾವಿ ಠಾಣೆ ವ್ಯಾಪ್ತಿಯ ಅಗತೀರ್ಥ ಸೀಮಾಂತರದಲ್ಲಿ ಕುರಿದೊಡ್ಡಿಯನ್ನು ಹಾಕಿರುತ್ತಾರೆ ಅಳಿಯ ಮತ್ತು ಮಾವನ ಮಧ್ಯ ಯಾವುದೋ ವಿಷಯಕ್ಕೆ ಜಗಳವಾಡುತ್ತಾರೆ. ಆ ಜಗಳದಲ್ಲಿ ಅಳಿಯ ಮಾವನಿಗೆ ತಲೆ ಹಿಂಬದಿಯಲ್ಲಿ ಕಟ್ಟಿಗೆಯಿಂದ ಹೊಡೆದಿರುತ್ತಾನೆ. ಅದರೆ ಈ ವಿಚಾರವನ್ನು ಸುಳ್ಳು ಕಟ್ಟುಕಥೆ ಕಟ್ಟಿ ಮತ್ತೊಬ್ಬರ ಮೇಲೆ ಪ್ರಕರಣ ದಾಖಲೆಯನ್ನು ಮಾಡಿಸಿರುತ್ತಾರೆ ಈ ಘಟನೆಯಲ್ಲಿ ಕುಟುಂಬಸ್ಥರೇ ಆರೋಪಿಗಳಾಗಿರುತ್ತಾರೆ.

ಈ ಘಟನೆಯು ದಿನಾಂಕ 19–4– 2025 ರಂದು ಸುಮಾರು 9:00 ಗಂಟೆ ರಾತ್ರಿ ವೇಳೆಯಲ್ಲಿ ಜರುಗಿರುತ್ತದೆ .

ಹೀಗೆ ಕುಟುಂಬಸ್ಥರೇ ಕೊಲೆ ಮಾಡಿ ನಾರಾಯಣಪುರ ಪೊಲೀಸ್ ಠಾಣೆಯಲ್ಲಿ ಸಾಯಂಕಾಲ 4 ಗಂಟೆಯಿಂದ್ ಶವವನ್ನು ಪ್ರತಿಭಟನೆ ಮಾಡುತ್ತಾರೆ

ಬಾಗಲಕೋಟ ಆಸ್ಪತ್ರೆಯಿಂದ ತಂದು ಪೊಲೀಸ್ ಠಾಣೆ ಮುಂದೆ ಇಟ್ಟು ಪೊಲೀಸರ ವಿರುದ್ಧ ಪ್ರತಿಭಟನೆ ಮಾಡುತ್ತಾರೆ ಪ್ರತಿಭಟನೆ ಮಾಡುದರ ಜೊತೆಗೆ ರಾತ್ರಿ 11 ಗಂಟೆವರೆಗೂ ಶವವನ್ನು ಪೊಲೀಸ್ ಠಾಣೆ ಮುಂದೆ ತಗೆದುಕೊಂಡು ಹೋಗುತ್ತಾರೆ.

# ಇಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬೀದರ: ಮೇ.3:–ಹುಮನಾಬಾದ ಕಾರ್ಯ ಮತ್ತು ಪಾಲನೆ ಉಪ–ವಿಭಾಗ ಜೆಸ್ಕಾಂ ವ್ಯಾಪ್ತಿಯ 11ಕೆ.ವಿ ಜೆಸ್ಕಾಂ ಫೀಡರ್ ಹಾಗು ನಂದಗಾಂವ ಐ.ಪಿ ಫೀಡರ್‌ಗಳು ಮೇ.4 ರಂದು ಬೆಳಿಗ್ಗೆ 07:00 ಗಂಟೆಯಿಂದ ಮಧ್ಯಾಹ್ನ 12:00 ಗಂಟೆಯವರೆಗೆ ಶ್ರೀ ವೀರಭದ್ರೇಶ್ವರ ದೇವಸ್ಥಾನ, ಬಪ್ಪಣ್ಣಾ ಬಡಾವಣೆ, ಎಂ.ಪಿ ಬಡಾವಣೆ, ಚೆಟ್ಟಿ ಬಡಾವಣೆ, ಬಸವೇಶ್ವರ ಚೌಕ, ಶಿವಾಜಿ ಚೌಕ, ಶಿವಪೂರ ಬಡಾವಣೆ, ರೈಲ್ವೆ ಸ್ಟೇಷನ್, ಫಕೀರಟೇಕ್ಡಾ ಬಡಾವಣೆ ಹಾಗು ಜೆಸ್ಕಾಂ ಕಛೇರಿಯ ಸುತ್ತ–ಮುತ್ತಲಿನ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿ ಮತ್ತು ಕಂಬಗಳನ್ನು ಸ್ಥಳಾಂತರಿಸುವ ಪ್ರಯುಕ್ತ 110 ಕೆ.ವಿ ಹುಮನಾಬಾದ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಜೆಸ್ಕಾಂ ಮತ್ತು ನಂದಗಾಂವ ಐ.ಪಿ ಫೀಡರ್‌ಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತಯ ಉಂಟಾಗಲಿದೆ. ಗ್ರಾಹಕರು ಸಹಕರಿಸಬೇಕೆಂದು ಹುಮನಾಬಾದ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರಕಾರಿ ಬಾಲಕಿಯರ ಬಲಮಂದಿರದ ವಿದ್ಯಾರ್ಥಿಗಳಿಂದ ಉತ್ತಮ ಸಾಧನೆ




ಮಲ್ಲಮ್ಮ ನುಡಿ ವಾರ್ತೆ

ಬೀದರ: ಮೇ.3:– ಬೀದರ ಜಿಲ್ಲೆಯ ಸರಕಾರಿ ಬಾಲಕಿಯರ ಬಾಲಮಂದಿರದ ವಿದ್ಯಾರ್ಥಿಗಳಾದ ಸ್ಪೂರ್ತಿ ತಂದೆ ವೀರಯ್ಯಾ (625/540) ಹಾಗೂ ಗಾಯತ್ರಿ ತಂದೆ ನರಸಪ್ಪಾ (625/501) ಎಂಬ ಮಕ್ಕಳು ಕಳೆದ 05 ವರ್ಷಗಳಿಂದ ಸಂಸ್ಥೆಯಲ್ಲಿ ಆಶ್ರಯ ಪಡೆದು, ಸರಕಾರಿ ಪ್ರೌಢ ಶಾಲೆ ಮೈಲೂರುನಲ್ಲಿ ವಿದ್ಯಾಭ್ಯಾಸ ಮಾಡಿ, 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆಂದು ಬೀದರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರಸರಕಾರವು ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ರಾಜ್ಯದಲ್ಲಿ ಅನಾಥ, ನಿರ್ಲಕ್ಷ್ಯತೆಗೊಳಗಾದ, ಪರಿತ್ಯಜಿಸಲ್ಪಟ್ಟ ಕುಟುಂಬದಿಂದ ಬೇರ್ಪಟ್ಟ, ಬಾಲಕಾರ್ಮಿಕತೆ, ಬಾಲ್ಯವಿವಾಹ, ಪೋಕ್ಸೋ ಹಾಗೂ ಇನ್ನಿತರೆ ದೌರ್ಜನ್ಯ ಮತ್ತು ಶೋಷಣೆಗೊಳಗಾದ ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಮತ್ತು ಪುನರ್ವಸತಿಗಾಗಿ ಪ್ರತ್ಯೇಕವಾಗಿ ಸರಕಾರಿ ಬಾಲಕಿಯರ ಮತ್ತು ಬಾಲಕರ ಬಾಲಮಂದಿರಗಳನ್ನು ಸ್ಥಾಪಿಸಿದೆ. ಎಂದು ಅವರು ತಿಳಿಸಿದ್ದಾರೆ.

# ಹಮಿದುಲ್ಲಾ ಆಂಗ್ಲ ಶಾಲೆಗೆ ಶೇ. 92ರಷ್ಟು ಫಲಿತಾಂಶ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ : 2024–24ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಪ್ರಕರಟವಾಗಿದ್ದು, ತಾಲೂಕಿನ ಮಂಗಲಗಿ ಗ್ರಾಮದ ಖಾದ್ರಿ ಶಿಕ್ಷಣ ಸಂಸ್ಥೆಯಡಿ ನಡೆಯುತ್ತಿರುವ ಹಮಿದುಲ್ಲಾ ಆಂಗ್ಲಾ ಮಾಧ್ಯಮ ಪ್ರೌಢ ಶಾಲೆಗೆ ಶೇ. 92ರಷ್ಟು ಫಲಿತಾಂಶ ಲಭಿಸಿದೆ.

ಶಾಲಾ ವಿದ್ಯಾರ್ಥಿಗಳಾದ ಸಿದ್ಧಾರ್ಥ ರೆಡ್ಡಿ ಗುರುನಾಥ ರೆಡ್ಡಿಗೆ ಶೇ. 92ರಷ್ಟು ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ, ಸುಹಾಸಿನಿ ಗುರುನಾಥಗೆ ಶೇ.87ರಷ್ಟು ಹಾಗೂ ಅಂಕಿತ ಸಂಜೀವರೆಡ್ಡಿಗೆ ಶೇ. 87ರಷ್ಟು ಅಂಕ ಪಡೆದು ದ್ವಿತೀಯ ಸ್ಥಾನ, ಫಕ್ರುದ್ದಿನಶಾ ಮುಸ್ತಫಾಶಾಗೆ ಶೇ. 86.4ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಖಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಎ. ಖಾದ್ರಿ ಸಾಬ್, ಮುಖ್ಯ ಶಿಕ್ಷಕ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗದವರು ಅಲ್ಲದೇ ಶಾಲಾ ಆಡಳಿತ ಮಂಡಳಿಯವರು ಹರ್ಷ ವ್ಯಕ್ತಪಡಿಸಿದ್ದಾರೆ.

**CITATION**

**IN THE COURT OF THE ADDL. CIVIL JUDGE AND JMFC., AT HUMNABAD**

**CRL. MISC. No.532/2025**

Petitioners:-

P-1. Sharadabai W/o Ramu Age:43 years Occu: Household R/o Village Govindthanda tq:chitguppa Dist:bidar Now at khanapur Kalaburgi.

P-2 jalibai W/o jagannath age:40 years occu:household R/o kalaburgi.

P-3 manik Rao S/o late ratan singh age 42 years.

P-4 kavita W/o manik Age:41 years R/o Village Chowki thanda Tq:chitguppa

P-5 murahari W/o late Rathnu Age 38 years R/o Village Govind thanda

P-6 pashuram S/o late Rathnu R/o Village Govind Thanda Tq:chitguppa.

Respondent:-

The registrar of birth and death through the Tahasildar Chitguppa.

Sub:- petition U/Sec 13(3) of birth and death Rgistration Act 1969

Whereas the above named petitioner has filed the petition under section 13(3) of Birth and Death Registration Act 1969 praying this Hon'ble court to issue Death certificate daughters of petitioner No. 1,2,4 and sons of petitioner No.3,5,6 namely; Late Laxmibai W/o Late Ratnu who died on 03-02-2022 at R/o Village Govind Thanda Tq:chitguppa Dist: Bidar. The petitioner claiming the death certificate of said Laxmi for transfer of property and other official purpose and home record.

Therefore, it is hereby proclaimed that if any person or persons have got any objection in this regard, may he/they May approach to this Honorable court on 30-05-2025 at 11.00 AM in person or authorized pleader to answer such claim otherwise the matter will be heard and determined in your absence as per law.

Given under my hand and seal of he court, this the 25-04-205

//By order of the court//
Chief Ministerial Officer,
Addl.Civil Judge and JMFC
Humnabad.

ಜೆ.ಜೆ.ಎಂ. ಕಳಪೆ ಕಾಮಗಾರಿ ಅಪೂರ್ಣಗೊಳ್ಳದ ಕಾಮಗಾರಿ ಗ್ರಾ.ಪಂ.ಗೆ ಹಸ್ತಾಂತರ

# ತನಿಖೆ ನಡೆಸಿ ಭ್ರಷ್ಟ ಪಿ.ಡಿ.ಓ ಅಮಾನತು ಮಾಡುವಂತೆ ಶರಣಬಸ್ಸಪ್ಪ ಎಲ್ಹೇರಿ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್/ ಯಲ್ಹೇರಿ: ತಾಲ್ಲೂಕಿನ ಯಲ್ಲೇರಿ ಗ್ರಾಮದಲ್ಲಿ ಜೆ.ಜೆ.ಎಂ.ಯೋಜನೆಯಡಿ ನಡೆದಿರುವ ಕಾಮಗಾರಿ ಸಂಪೂರ್ಣ ಕಳಪೆ ಪ್ರಮಾಣದಲ್ಲಿದ್ದು, ಕಾಮಗಾರಿ ಪೂರ್ಣಗೊಳ್ಳದೇ ಪಿಡಿಓ ರವರು ಈ ಕಾಮಗಾರಿಯನ್ನು ಗ್ರಾ.ಪಂ.ಗೆ ಹಸ್ತಾಂತರ ಮಾಡಿಕೊಂಡಿದ್ದು, ತನಿಖೆ ನಡೆಸಿ, ಕ್ರಮ ಕೈಗೊಳ್ಳಬೇಕು ಎಂದು ಶರಣಬಸ್ಸಪ್ಪ ಎಲ್ಹೇರಿ ಕರವೇ ತಾಲೂಕು ಘಟಕದ ಅಧ್ಯಕ್ಷರು ಇಂದು ತಾ.ಪಂ. ಕಾರ್ಯನಿರ್ವಹಣಾಧಿಕಾರಿಗಳಾದ ಅಂಬರೀಷ ಪಾಟೀಲರವರಿಗೆ ದೂರು ಸಲ್ಲಿಸಿದ್ದಾರೆ.

ಗುರುಮಠಕಲ್ ತಾಲ್ಲೂಕಿನ ಯಲ್ಲೇರಿ ಗ್ರಾಮದಲ್ಲಿ ಜೆ.ಜೆ.ಎಂ. ಯೋಜನೆಯಡಿ ನಡೆದಿರುವ ಕಾಮಗಾರಿ ಅಂದಾಜು ಪತ್ರಿಕೆ ಪ್ರಕಾರ ಮಾಡದೇ, ಬೇಕಾಬಿಟ್ಟಿ ಕಾಮಗಾರಿ ಮಾಡಿದ್ದು, ಯಲ್ಲೇರಿ ಗ್ರಾಮದ 1162 ಮನೆಗಳಿಗೆ ನಳಗಳ ಸಂಪರ್ಕ ಕಲ್ಪಿಸುವ ಕಾಮಗಾರಿ ಅಂದಾಜು ಮೊತ್ತ 174.30 ಲಕ್ಷ, ಕರಾರು ಮೊತ್ತ ರೂ. 170.22 ಲಕ್ಷ ಇದ್ದು, ಕಾಮಗಾರಿ ಪ್ರಾರಂಭವಾಗಿ ಸುಮಾರು 4 ವರ್ಷಗಳ ಕಾಲ ಕಳೆದರೂ, ಪ್ರಗತಿಯಲ್ಲಿದೆ ಎಂದು ತೇ–ೞರಿಕೆಗೆ ತೋರಿಸಿ. ಕಾಮಗಾರಿ ಪ್ರಗತಿ ಹಂತದಲ್ಲಿರುವಾಗಲೇ ತರಾತುರಿಯಲ್ಲಿ ಗ್ರಾ. ಪಂ ಸದಸ್ಯರ ಸಭೆ ಕರೆಯದೆ ಅವರ ಗಮನಕ್ಕೂ ತರದೆ ಹಸ್ತಾಂತರ ಮಾಡಿಕೊಂಡಿರುತ್ತಾರೆ.

ಯಲ್ಹೇರಿ ಗ್ರಾಪಂ ಅಧಿಕಾರಿಗಳಾದ ಶೋಭಾ ಪಾಟೀಲ್ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ ಹಾಗಾಗಿ ಹಸ್ತಾಂತರ ಮಾಡಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ.

ಪ್ರಸ್ತುತ ಕಾಮಗಾರಿ ಕಳಪೆ ಹಂತದಲ್ಲಿದ್ದು, ತನಿಖಾ ತಂಡದವರು ಕೂಡಾ ಸುಳ್ಳು ವರದಿ ನೀಡಿದ್ದಾರೆ. ಕಾಮಗಾರಿಯ ತನಿಖೆ ನಡೆಸಿ ಮತ್ತು ಪಿಡಿಓ ರವರು ಗುತ್ತಿಗೆದಾರರ ಜೊತೆ ಸೇರಿ ಹಣವನ್ನು ಲೂಟಿ ಮಾಡಿರುತ್ತಾರೆಂದು ಅನುಮಾನವಿದೆ.

ಸಂಪೂರ್ಣ ತನಿಖೆ ಮಾಡಿ, ತನಿಖಾ ತಂಡವನ್ನು ರೂಪಿಸಿ 1162 ಮನೆಗಳ ನಳಗಳ ವೀಕ್ಷಣೆ ಮಾಡಿ ಭ್ರಷ್ಟ ಪಿ. ಡಿ. ಓ ಮತ್ತು ಗುತ್ತೆಗೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕರವೇ ತಾಲೂಕು ಪದಾಧಿಕಾರಿಗಳಾದ ಕಾಶಿನಾಥ್ ಚಂಡರಿಕಿ, ಚೆನ್ನಪ್ಪ ಕಾಕಲವರ್, ಸಾಯ್ಬಣ್ಣ ಸಿದ್ದಾಪುರ, ಭೀಮು ಬೂದೂರ್, ನರಸಿಂಹ ಇನ್ನೂ ಕಾರ್ಯಕರ್ತರು ಉಪಸ್ಥಿತರಿದ್ದರು.


# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರಕಾರಿ ಬಾಲಕಿಯರ ಬಲಮಂದಿರದ ವಿದ್ಯಾರ್ಥಿಗಳಿಂದ ಉತ್ತಮ ಸಾಧನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ: ಮೇ.3:– ಬೀದರ ಜಿಲ್ಲೆಯ ಸರಕಾರಿ ಬಾಲಕಿಯರ ಬಾಲಮಂದಿರದ ವಿದ್ಯಾರ್ಥಿಗಳಾದ ಸ್ಪೂರ್ತಿ ತಂದೆ ವೀರಯ್ಯಾ (625/540) ಹಾಗೂ ಗಾಯತ್ರಿ ತಂದೆ ನರಸಪ್ಪಾ (625/501) ಎಂಬ ಮಕ್ಕಳು ಕಳೆದ 05 ವರ್ಷಗಳಿಂದ ಸಂಸ್ಥೆಯಲ್ಲಿ ಆಶ್ರಯ ಪಡೆದು, ಸರಕಾರಿ ಪ್ರೌಢ ಶಾಲೆ ಮೈಲೂರುನಲ್ಲಿ ವಿದ್ಯಾಭ್ಯಾಸ ಮಾಡಿ, 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆಂದು ಬೀದರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರಸರಕಾರವು ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ರಾಜ್ಯದಲ್ಲಿ ಅನಾಥ, ನಿರ್ಲಕ್ಷ ತೆಗೊಳಗಾದ, ಪರಿತ್ಯಜಿಸಲ್ಪಟ್ಟ ಕುಟುಂಬದಿಂದ ಬೇರ್ಪಟ್ಟ, ಬಾಲಕಾರ್ಮಿಕತೆ, ಬಾಲ್ಯವಿವಾಹ, ಪೋಕ್ಸೋ ಹಾಗೂ ಇನ್ನಿತರೆ ದೌರ್ಜನ್ಯ ಮತ್ತು ಶೋಷಣೆಗೊಳಗಾದ ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಮತ್ತು ಪುನರ್ವಸತಿಗಾಗಿ ಪ್ರತ್ಯೇಕವಾಗಿ ಸರಕಾರಿ ಬಾಲಕಿಯರ ಮತ್ತು ಬಾಲಕರ ಬಾಲಮಂದಿರಗಳನ್ನು ಸ್ಥಾಪಿಸಿದೆ. ಎಂದು ಅವರು ತಿಳಿಸಿದ್ದಾರೆ.

# ಹಳ್ಳೂರ ಪ್ರೌಢಶಾಲೆಗೆ ಜ್ಯೋತಿ ಪ್ರಥಮ





ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2– ತಾಲೂಕಿನ ಹಳ್ಳೂರ ಗ್ರಾಮದ ಬಸವೇಶ್ವರ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶ ಶೇ.72.28 ರಷ್ಟಾಗಿದ್ದು, ಜ್ಯೋತಿ ಎಂ.ಬ್ಯಾಲ್ಯಾಳ 566(ಶೇ.90.56) ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ನೇತ್ರಾ ಕೆ.ಸುನಗದ 550(ಶೇ.88) ಅಂಕ ಗಳಿಸಿ ದ್ವಿತೀಯ ಸ್ಥಾನ ಹಾಗೂ ಪಾರ್ವತಿ ಎಸ್.ಮೇಟಿ 548(ಶೇ.87.68)ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

3 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ಹಾಗೂ 34 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ ಎಂದು ಶಾಲೆಯ ಮುಖ್ಯೋಪಾಧ್ಯಾಯ ಎಂ.ಜಿ.ಬೂದಿಹಾಳ ತಿಳಿಸಿದ್ದಾರೆ.

# ಬೆನಕಟ್ಟಿ ಪ್ರೌಢಶಾಲೆಗೆ ಹೇಮಾ ಪ್ರಥಮ





ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.3–ತಾಲೂಕಿನ ಬೆನಕಟ್ಟಿಯ ಹೇಮರಡ್ಡಿಮಲ್ಲಮಾಂಬೆ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶ ಶೇ.76.47 ರಷ್ಟಾಗಿದ್ದು, ಹೇಮಾ ನೀಲಪ್ಪ ಅಮಾತೆಪ್ಪನವರ ಶೇ.88.32 ಅಂಕ ಗಳಿಸಿ ಶಾಲೆಗೆ ಪ್ರಥಮಳಾಗಿದ್ದಾಳೆ.

ಮುನಿಯಪ್ಪ ಎಸ್.ಪಾತ್ರೋಟಿ ಶೇ.83.20 ಅಂಕ ಪಡೆದು ದ್ವಿತೀಯ ಮತ್ತು ಪ್ರತಿಭಾ ಕೆ.ಪಾಟೀಲ ಶೇ.82.88 ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ಪರೀಕ್ಷೆ ಬರೆದ 51 ವಿದ್ಯಾರ್ಥಿಗಳಲ್ಲಿ 39 ವಿದ್ಯಾರ್ಥಿಗಳು ಪಾಸಾಗಿದ್ದು, ಓರ್ವ ಪ್ರಶಸ್ತಿ ಸಹಿತಿ ಪ್ರಥಮ ದರ್ಜೆ, 27 ಜನ ಪ್ರಥಮ ದರ್ಜೆ, 8 ವಿದ್ಯಾರ್ಥಿಗಳು ದ್ವಿತೀಯ ಹಾಗೂ 3 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಮುಖ್ಯೋಪಾಧ್ಯಾಯ ಎಂ.ಎ.ಮುನವಳ್ಳಿ ತಿಳಿಸಿದ್ದಾರೆ.

# ವೈಭವದಿಂದ ಜರುಗಿದ ದಿಗಂಬರೇಶ್ವರ ಮಠದ ಜಾತ್ರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.3–ನಗರದ ನವನಗರ ರಸ್ತೆಯಲ್ಲಿರುವ ಶ್ರೀದಿಗಂಬರೇಶ್ವರ ಮಠದ ಮಹಾರಥೋತ್ಸವವು ಶುಕ್ರವಾರ ಸಂಜೆ ಅದ್ದೂರಿಯಾಗಿ ಜರುಗಿತು.

ಶ್ರೀಮಠದ ಮುಂಭಾಗವಿರುವ ಕೆಂಪುರಸ್ತೆಯಲ್ಲಿ ರಥೋತ್ಸವ ಜರುಗಿತು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ಪುನೀತರಾದರು. ಸಂಜೆ 5 ಗಂಟೆ ವೇಳೆಗೆ ಶ್ರೀದಿಗಂಬರೇಶ್ವರ, ಶ್ರೀಮಾತಾ ಕಪ್ಪರ ಪಡಿಯಮ್ಮನವರ ಉತ್ಸವ ಮೂರ್ತಿಗಳಿಗೆ, ತೇರಿನ ಕಳಸಕ್ಕೆ ಪೂಜೆ ಸಲ್ಲಿಸಿ, ತೇರಿನ ಕಳಸದ ಪ್ರತಿಷ್ಠಾಪನೆಯೊಂದಿಗೆ 9ನೇ ವರ್ಷದ ಮಹಾರಥೋತ್ಸವ ಜರುಗಿತು.

ಬಸವರಾಜಪ್ಪನವರ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಗರಾಳದ ಶ್ರೀಶೇಷಪ್ಪಯ್ಯ ಸ್ವಾಮೀಜಿ ಸೇರಿದಂತೆ ಗಣ್ಯರು ಭಾಗಿಯಾಗಿದ್ದರು. ಕಾರ್ಯಕ್ರಮದಲ್ಲಿ ಬಸಪ್ಪಜ್ಜನವರ ಕುರಿತಾದ ಗ್ರಂಥ ಲೋಕಾರ್ಪಣೆಗೊಳಿಸಲಾಯಿತು.

ಜಾತ್ರಾಮಹೋತ್ಸವದ ಅಂಗವಾಗಿ ಗುರುವಾರ ರಾತ್ರಿ ಟಗರಿನ ಕಾಳಗ ಜರುಗಿತು. ಜಿದ್ದಾಜಿದ್ದಿನ ಕಣದಲ್ಲಿ ಟಗರಗಳು ಸೆಣಸಾಡಿದವು, ಭಾರೀ ಸಂಖ್ಯೆಯಲ್ಲಿ ಜನ ಕಾಳಗ ವೀಕ್ಷಿಸಲು ಆಗಮಿಸಿದ್ದರು. ವಿಜೇತ ಟಗರುಗಳಿಗೆ ಪ್ರಥಮ ಬಹುಮಾನವಾಗಿ 50 ಸಾವಿರ, ದ್ವಿತೀಯ ಬಹುಮಾನ 30 ಸಾವಿರ, ತೃತೀಯ ಬಹುಮಾನ 20 ಸಾವಿರ ಹಾಗೂ ಚತುರ್ಥ ಬಹುಮಾನವಾಗಿ 10 ಸಾವಿರ ರೂ.ಗಳ ಬಹುಮಾನ ನೀಡಲಾಯಿತು.

## ಶ್ರೀಗಳು, ಸಂಸದ ಗದ್ದಿಗೌಡರ ಚಾಲನೆ

# ಹೇಮರಡ್ಡಿ ಮಲ್ಲಮ್ಮ, ಸಿದ್ಧಲಿಂಗ ಶ್ರೀಗಳ ಮೂರ್ತಿ ಭವ್ಯ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.3–ತಾಲೂಕಿನ ಶಿರೂರ ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ರವಿವಾರ ಪ್ರತಿಷ್ಠಾಪನೆಗೊಳ್ಳಲಿರುವ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಹಾಗೂ ಲಿಂ.ಸಿದ್ಧಲಿಂಗ ಮಹಾಸ್ವಾಮಿಗಳವರ ಮೂರ್ತಿಗಳ ಮೆರವಣಿಗೆ ಶನಿವಾರ ವೈಭವದಿಂದ ಜರುಗಿತು.

ಮುಂಜಾನೆ 8 ಗಂಟೆಗೆ ಸ್ಥಳೀಯ ಸಿದ್ದೇಶ್ವರ ಪ್ರೌಢಶಾಲೆಯ ಆವರಣದಲ್ಲಿ ಸ್ಥಳೀಯ ಶಿವಯೋಗಾಶ್ರಮದ ಸಿದ್ಧಲಿಂಗ ಮಹಾಸ್ವಾಮಿಗಳು ಹಾಗೂ ಗದ್ದನಕೇರಿಯ ಮಳೇರಾಜೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಮೂರ್ತಿಗಳ ಮೆರವಣಿಗೆಗೆ ಸಂಸದ ಪಿ.ಸಿ.ಗದ್ದಿಗೌಡರ ಚಾಲನೆ ನೀಡಿದರು.

300 ಕ್ಕೂ ಹೆಚ್ಚು ಮಹಿಳೆಯರ ಪೂರ್ಣಕುಂಭ, ಕೊಣ್ಣೂರಿನ ಡೊಳ್ಳುಕುಣಿತ, ಕಡಪಟ್ಟಿಯ ಜಾಂಜಪತಕ ಸೇರಿ ಅನೇಕ ಕಲಾ ತಂಡಗಳ ವಾದ್ಯವೈಭವಗಳೊಂದಿಗೆ ನೂತನ ಮೂರ್ತಿಗಳು ಹಾಗೂ ದೇವಸ್ಥಾನದ ಕಳಸದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆದು ಬಾಗಲಕೋಟೆ ರಸ್ತೆಯಲ್ಲಿರುವ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ತಲುಪಿತು. ಮಧ್ಯಾಹ್ನ ಸೂಳಿಭಾವಿಯ ವೆಂಕಮ್ಮ ನರಸಣ್ಣವರ ಅವರಿಂದ ಅನ್ನ ಪ್ರಸಾದ ಸೇವೆ ನಡೆಯಿತು.

ಹೇಮರಡ್ಡಿ ಮಲ್ಲಮ್ಮ ವಿಕಾಸ ಸಂಸ್ಥೆ ಅಧ್ಯಕ್ಷ ರವಿ ಗಿರಿಜಾ, ಕಾರ್ಯಾಧ್ಯಕ್ಷ ನೀಲಪ್ಪ ಕೋಟಿಕಲ್, ಎಸ್.ಬಿ.ಮಾಚಾ, ರಂಗಪ್ಪ ಮಳ್ಳಿ, ಡಾ.ವಾಯ್.ಕೆ.ಕೋಟಿಕಲ್, ಡಾ.ನಿಂಗಪ್ಪ ನಡುವಿನಮನಿ, ನಿವೃತ್ತ ಡಿವಾಯ್‌ಎಸ್‌ಪಿ ಬಸವರಾಜ ಬಾವಲತ್ತಿ, ಸಿದ್ದಪ್ಪ ಕೋಟಿಕಲ್, ಮುತ್ತು ಹಳದೂರ, ಶೇಖರಪ್ಪ ಮಾಚಾ, ನೀಲಪ್ಪ ಬಾರಡ್ಡಿ, ಎಸ್.ಎಚ್.ಗುಲಗಂಜಿ, ಎಸ್.ಎಫ್.ಬಾರಡ್ಡಿ, ಬಸವರಾಜ ನಡುವಿನಮನಿ, ಎಚ್.ಬಿ.ನಾಯ್ಕಲ್, ಸೇರಿದಂತೆ ಶಿರೂರಿನ ಹಿರಿಯರು, ಯುವಕರು, ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೊಟೆ,ಮೇ.3–ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿಯ ಹತ್ಯೆ ಖಂಡಿಸಿ ಭಾರತೀಯ ಜನತಾ ಪಕ್ಷ ಬಾಗಲಕೋಟೆ ವಿಧಾನ ಸಭಾ ಮತಕ್ಷೇತ್ರದ ನಗರ ಮಂಡಲ ವತಿಯಂದ ಪ್ರತಿಭಟನೆ ನಡೆಸಿತು.

ಶುಕ್ರವಾರ ಸಂಜೆ ನಗರದ ಶಿವಾನಂದ ಜೀನ್‌ನಲ್ಲಿನ ಬಿಜೆಪಿ ಕಾರ್ಯಾಲಯದಿಂದ ಪಾದಯಾತ್ರೆ ಮೂಲಕ ಬಸವೇಶ್ವರ ವೃತ್ತಕ್ಕೆ ಆಗಮಿಸಿ ಮಾನವ ಸರಪಳಿ ನಿರ್ಮಿಸಿ, ಮಂಗಳೂರಿನಲ್ಲಿ ಗುರುವಾರ ರಾತ್ರಿ ಜನಸಾಂದ್ರತೆ ಇರುವ ಸ್ಥಳದಲ್ಲಿಯೇ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಅವರನ್ನು ಬರ್ಬರವಾಗಿ ಕೊಲೆ ಮಾಡಲಾಗಿದ್ದು, ಇದು ರಾಜ್ಯ ಸರಕಾರದ ರಕ್ಷಣಾ ವಿಫಲತೆಯನ್ನು ಎತ್ತಿ ತೋರಿಸುತ್ತದೆ. ಇದು ಖಂಡನೀಯ ಎಂದು ಪ್ರತಿಭಟನಾಕಾರರು ಹೇಳಿದರು.

ಬಿಜೆಪಿ ಪಕ್ಷದ ಬೆಳಗಾವಿ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾ ವಕ್ತಾರ ಸತ್ಯನಾರಾಯಣ ಹೇಮಾದ್ರಿ ಮಾತನಾಡಿ ಹಿಂದೂಗಳ ಮೇಲೆ ನಿರತಂತರವಾಗಿ ಹಲ್ಲೆಗಳು ನಡೆಯುತ್ತಿದ್ದು ಇದಕ್ಕೆ ಸರಕಾರವೇ ನೇರ ಹೊಣೆ ಎಂದರು.

ಪ್ರತಿಭಟನೆಯಲ್ಲಿ ಗುಂಡುರಾವ ಶಿಂಧೆ, ಡಾ.ಎಂ.ಎಸ್.ದಡ್ಡೆನ್ನವರ, ರಾಜು ರೇವಣಕರ, ಯಲ್ಲಪ್ಪ ನಾರಾಯಣಿ, ಸಾಗರ ಬಂಡಿ, ಬಸವರಾಜ ಅವರಾದಿ, ರಾಜು ಶಿಂತ್ರೆ, ಶಂಕರ ಗಲಗ, ಅಶೋಕ ಪವಾರ, ದೂಳಪ್ಪ ಕೊಪ್ಪದ, ರವಿ ನಾಯಕ, ಕಾಂತು ಖಾತೆದಾರ, ಆನಂದ ಕೊಟಗಿ, ಕಿರಣ ಬಾಗೇವಾಡಿ, ರಜತ ದಾವಗೇರಿ, ಹೊನ್ನಪ್ಪ ಅಂಬಿಗೇರ, ಶಿವು ಬೇವೂರ, ಸುರೇಶ ಮಜ್ಜಿಗಿ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ದೇಶದ ಬೆಳವಣಿಗೆಯಲ್ಲಿ ಯುವಕರ ಪಾತ್ರ ಮುಖ್ಯ–ಲಾಗಲೋಟಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.3–ಗ್ರಾಮಗಳ ಅಭಿವೃದ್ಧಿ ಜೊತೆ ದೇಶದ ಸಮಗ್ರ ಬೆಳವಣಿಗೆಯಲ್ಲಿ ಯುವಕರ ಪಾತ್ರ ಪ್ರಮುಖವಾಗಿದೆ ಎಂದು ಅಶೋಕ ಲಾಗಲೋಟಿ ಹೇಳಿದರು.

ಸಮೀಪದ ಮಲ್ಲಾಪೂರ ಪುನರವಸತಿ ಕೇಂದ್ರದಲ್ಲಿ ಗುರುವಾರ ಆರಂಭಗೊಂಡ ಶಿರೂರಿನ ಸಿದ್ಧಲಿಂಗೇಶ್ವರ ಗ್ರಾಮೀಣ ಕಲಾ ಮಹಾವಿದ್ಯಾಲಯದ ಎನ್.ಎಸ್.ಎಸ್.ವಾರ್ಷಿಕ ವಿಶೇಷ ಶಿಬಿರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತ ಹಳ್ಳಿಗಳ ದೇಶ. ಗ್ರಾಮಗಳು ಅಭಿವೃದ್ಧಿಯಾದರೆ ದೇಶದ ಸಮಗ್ರ ಅಭಿವೃದ್ಧಿಯಾಗುತ್ತದೆ. ಇದನ್ನು ಯುವ ಜನಾಂಗ ತಿಳಿದು ಗ್ರಾಮಗಳ ಅಭಿವೃದ್ಧಿಯಲ್ಲಿ ಕೈಜೋಡಿಸಬೇಕು ಎಂದರು.

ಶಿಬಿರವನ್ನು ಉದ್ಘಾಟಿಸಿದ ಟಿ.ಎಂ.ಭಗವತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶ್ರೀಶೈಲ ಕರಿಶಂಕರಿ, ದೇಶದ ಬೆಳವಣಿಗೆಯಲ್ಲಿ ಯುವಕರ ಪಾತ್ರ ಪ್ರಮುಖವಾಗಿದೆ. ಎನ್.ಎಸ್.ಎಸ್.ಶಿಬಿರದ ಮೂಲಕ ಸೇವಾ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಆರ್.ಬಿ.ಬಾರಡ್ಡಿ ಉಪನ್ಯಾಸ ನೀಡಿದರು. ರವಿ ಉಪ್ಪಾರ, ಪ್ರಾಚಾರ್ಯ ಸಂಗಮೇಶ ಕೆ–ಂಜೋಡಿ, ಗುರು ಅನಗವಾಡಿ, ಎಸ್.ಎಸ್.ಕರಿಶಂಕರಿ, ಯಲ್ಲಪ್ಪ ಕೊಣ್ಣೂರ, ರೇಣುಕಾ ಗದಿಗೆನ್ನವರ, ಗಣಪತಿ ಲಾಗಲೋಟಿ, ಶ್ರೀಧರ ಪತ್ತಾರ, ಪಿ.ಟಿ.ಪಾಟೀಲ, ಭಾಗ್ಯಶ್ರೀ ಹೂಗಾರ ಇದ್ದರು.

# ಅಕ್ರಮ ಮಣ್ಣು ಮಾರಾಟ : ಆದೇಶ ರದ್ದು ಮಾಡಲು ಕುಣಿಕೇರಿ ಗ್ರಾಮಸ್ಥರ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಣಿಕೇರಿ ಗ್ರಾಮ ನಾಗರಿಕ ವೇದಿಕೆ ಹಾಗೂ ಕರ್ನಾಟಕ ರೈತ ಸಂಘ ಕೊಪ್ಪಳ ಇವರ ನೇತೃತ್ವದಲ್ಲಿ ಕೊಪ್ಪಳ ತಾಲ್ಲೂಕಿನ ಕುಣಿಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ದೊಡ್ಡ ಕೆರೆ ಹಾಗೂ ಸಣ್ಣ ಕೆರೆಯ ಉಳೂ (ಮಣ್ಣು) ಅಕ್ರಮ ಮಾರಾಟ ತಡೆದು ಅನುಮತಿಯನ್ನು ರದ್ದು ಪಡಿಸಿ ಕೆರೆಗಳ ಸಂರಕ್ಷಣೆ ಮಾಡಿ ಉದ್ಯೋಗ ಖಾತ್ರಿ ಕೆಲಸ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು.

ಶನಿವಾರದಂದು ಕುಣಿಕೇರಿ ಗ್ರಾಮ ಪಂಚಾಯತಿ ಎದುರು ಧರಣಿ ಸತ್ಯಾಗ್ರಹ ನಡೆಸಿದ ಗ್ರಾಮಸ್ಥರು, ಅಕ್ರಮ ಮಣ್ಣನ್ನು ತಡೆಗಟ್ಟಬೇಕು ಹಾಗೂ ಪರವಾನಗಿ ರದ್ದುಪಡಿಸಬೇಕಂದು ಆಗ್ರಹಿಸಿದರು. ಕುಣಿಕೇರಿ ದೊಡ್ಡ ಕೆರೆ ಹಾಗೂ ಚಿಕ್ಕ ಕೆರೆಯ ಉಳೂ ಮಣ್ಣು ತುಂಬಾ ಫಲವತ್ತತೆ ಇದ್ದು, ರೈತರ ವಲಯಕ್ಕೆ ಅನುಕೂಲಕರ ಇರುತ್ತದೆ. ಆದರೆ ಅಕ್ರಮ ಇಟ್ಟಿಗೆ ಬಟ್ಟೆದಂದೇ ಕೋರರು ಈಗಾಗಲೇ ಸುಮಾರು ಆಳದವರೆಗೆ ಮಣ್ಣನ್ನು ಅಗೆದು ಇಟ್ಟಿಗೆ ಬಟ್ಟೆಗೆ ಮಾರಾಟ ಮಾಡಿರುತ್ತಾರೆ. ಸದರಿ ಫಲವತ್ತತೆಯ ಮಣ್ಣನ್ನು ಇಟ್ಟಿಗೆ ತಯಾರಿಕೆಗೆ ಉಪಯೋಗಿಸಲು ಕಾನೂನು ವಿರೋಧ ಇರುತ್ತದೆ. ಆದ ಕಾರಣ ಯಾವುದೇ ಅಕ್ರಮ ಚಟುವಟಿಕೆಗೆ ಫಲವತ್ತತೆಯ ಮಣ್ಣನ್ನು ತೆಗೆದುಕೊಳ್ಳಲು ಅನುಮತಿ ನೀಡಬಾರದೆಂದು ಸುತ್ತಮುತ್ತಲಿನ ರೈತರ ಹಾಗೂ ಕುಣಿಕೇರಿ ಗ್ರಾಮದ ರೈತರ ವಿರೋಧ ಇರುತ್ತದೆ. ಆದ ಕಾರಣ ತಾವುಗಳು ದಿನಾಂಕ: 31–01–2025 ರಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಾರ್ಯಾನುಮತಿ ಪತ್ರವನ್ನು ರದ್ಧುಪಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಬೇಕು.

ಕುಣಿಕೇರಿ ಗ್ರಾಮದ ಕೆರೆಗಳ ಸಂರಕ್ಷಣೆ ಮಾಡಬೇಕು ಹಾಗೂ ಉದ್ಯೋಗ ಖಾತ್ರಿ ಕೆಲಸವನ್ನು ನೀಡಬೇಕು. ಈಗಾಗಲೇ ನಮ್ಮ ದೊಡ್ಡ ಕೆರೆಯಲ್ಲಿ ತಾವು ಅನುಮತಿ ಕೊಟ್ಟ ನಂತರ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು 1 ಮೀಟರ್‌ಗೆ ಅನುಮತಿ ನೀಡಿರುತ್ತಾರೆ. ಆದರೆ ಪರವಾನಿಗೆದಾರರು 3 ಮೀಟರ್‌ದಿಂದ ಸುಮಾರು 4 ಮೀಟರ್ ಹಾಳದವರೆಗೆ ಮಣ್ಣನ್ನು ಅಗೆದಿರುತ್ತಾರೆ. ಇದು ಕಾನೂನು ಉಲ್ಲಂಘನೆಯಾಗಿರುತ್ತದೆ. ಇದರ ವಿರುದ್ಧವಾಗಿ ಕುಣಿಕೇರಿ ಗ್ರಾಮಸ್ಥರ ತಕರಾರು ಇರುತ್ತದೆ. ದೊಡ್ಡ ಕೆರೆಯಲ್ಲಿ ಮಣ್ಣು ತೆಗೆಯುವ ಸಂದರ್ಭದಲ್ಲಿ ಸುಮಾರು 40 ರಿಂದ 45 ಗಿಡ ಮರಗಳನ್ನು ಕಿತ್ತು ಅರಣ್ಯ ಸಂಪತ್ತನ್ನು ನಾಶ ಮಾಡಿರುತ್ತಾರೆ. ಇಲ್ಲಿನ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ಠರಾವಿನಂತೆ ಕೆರೆಯ ಮಣ್ಣನ್ನು ಬೇರೆಡೆ ಸಾಗಿಸಬಾರದೆಂದು ಸೂಚಿಸಲಾಗಿದ್ದು, ಅದನ್ನು ಉಲ್ಲಂಘಿಸಿ ಮಣ್ಣನ್ನು ಬೇರೆಡೆಗೆ ಸಾಗಿಸುತ್ತಿದ್ದಾರೆ. ಆದ್ದರಿಂದ ತಾವುಗಳು ಯಾವುದೇ ತರಹದ ಪರವಾನಿಗೆಗೆ ಅನುಮತಿಯನ್ನು ನೀಡಬಾರದು. ನಮ್ಮ ಬೇಡಿಕೆ ಈಡೇರುವವರೆಗೆ ನಮ್ಮ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಮುಂದುವರೆಸಲಾಗುವುದು. ಕಾರಣ ತಾವುಗಳು ಅನುಮತಿಯನ್ನು ರದ್ದುಪಡಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಧರಣಿ ಸತ್ಯಾಗ್ರಹದಲ್ಲಿ ಪ್ರಗತಿಪರ ಹೋರಾಟಗಾರರಾದ ಅಲ್ಲಮಪ್ರಭು ಬೆಟ್ಟದೂರು, ಡಿ.ಎಚ್.ಪೂಜಾರ್, ಕೆ.ಬಿ.ಗೋನಾಳ, ಗಾಳೆಪ್ಪ ಮುಂಗೋಲಿ, ಬಸವರಾಜ ನರೆಗಲ್, ಮುದುಕಪ್ಪ ಹೊಸಮನಿ ಸೇರಿದಂತೆ ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಅಂತ್ಯಗೊಂಡ ಕಲಾ ಬದುಕು ಕಲಾವಿದ ಈರಯ್ಯ ಹಿರೇಮಠ ನಿಧನ



ಮಲ್ಲಮ್ಮ ನುಡಿ ವಾರ್ತೆ

ಕುಕುನೂರು : ತಾಲೂಕಿನ ಮಂಡಲಗಿರಿ ಗ್ರಾಮದ ಮಹಾನ್ ರಂಗಭೂಮಿ ಕಲಾವಿದ, ಚಲನಚಿತ್ರ ನಟ ಹಿರೇಮಠ ತಮ್ಮ ಬದುಕಿನ ನಾಟಕದ ಪಯಣ ಮುಗಿಸಿ ಇಹಲೋಕ ತ್ಯಜಿಸಿದ್ದಾರೆ.

ಮೂಲತಃ ಮಂಡಲಗಿರಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ ವೀರಯ್ಯ ಹಿರೇಮಠ ಕಲೆಯ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದು ವೃತ್ತಿ ರಂಗಭೂಮಿಯ ಬಳಗವನ್ನು ಸೃಷ್ಟಿಸಬೇಕು ಎಂಬ ಹಂಬಲದಿಂದ ತಮ್ಮ ಸ್ನೇಹ ಬಳಗದೊಂದಿಗೆ ಕೂಡಿಕೊಂಡು ತೋಂಟದಾರ್ಯ ನಾಟ್ಯ ಸಂಘ ಮಂಡಲಗಿರಿ ಎಂಬ ನಾಟಕ ಕಂಪನಿಯನ್ನು ಕಟ್ಟಿ ಬೆಳೆಸಿ ಇಲ್ಲಿಯ ತನಕ ನಡೆಸಿಕೊಂಡು ಬಂದ ಮಹಾನ್ ಕೀರ್ತಿ ವೀರಯ್ಯನವರಿಗೆ ಸಲ್ಲುತ್ತದೆ.

ವೃತ್ತಿ ರಂಗಭೂಮಿಯಲ್ಲಿ ಸಾವಿರಾರು ಕಲಾವಿದರಿಗೆ ಆಸರೆಯಾಗಿ ದಾರಿದೀಪವಾಗಿದ್ದ ವೀರಯ್ಯ ಹಿರೇಮಠ ದಿನಾಂಕ 03.05.2025ರ ಶನಿವಾರ ಬೆಳಗ್ಗೆ 11:00 ಗಂಟೆಗೆ ತಮ್ಮ ಜೀವನದ ಪಯಣ ಮುಗಿಸಿದ್ದು ಅವರ ಅಪಾರ ಅಭಿಮಾನಿ ಬಳಗ ಸೇರಿದಂತೆ ಅವರ ಕುಟುಂಬ ಸದಸ್ಯರನ್ನು ಅಗಲಿರುತ್ತಾರೆ.

# ಕರವೇ ಸ್ವಾಭಿಮಾನಿ ಬಣದ,,! ಗ್ರಾಮ ಘಟಕ ಪದಾಧಿಕಾರಿಗಳ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಕುಕನೂರ : ಕನ್ನಡಪರ ಸಂಘಟನೆಗಳು ಸಾರ್ವಜನಿಕರ ಹಾಗೂ ಸಮಾಜದಲ್ಲಿನ ಚಿಂತನೆಗಳ ಪರ ಕಾರ್ಯ ನಿರ್ವಹಿಸಲು ಮುಂದಾಗಬೇಕಿದೆ ಎಂದು ಯುವ ಮುಖಂಡ ಭರತರಾಮೇಗೌಡ ಹೇಳಿದರು.

ಅವರು ತಾಲೂಕಿನ ಕುದರಿಮೋತಿ ಗ್ರಾಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಗ್ರಾಮ ಘಟಕದ ಪದಾಧಿಕಾರಿಗಳ ನೇಮಕ ಹಾಗೂ ನಾಮ ಫಲಕ ಅನಾವರಣ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ನಂತರ ಸಂಘಟನೆಯ ಜಿಲ್ಲಾಧ್ಯಕ್ಷ ಬಸವರಾಜ ಹಳ್ಳಿ ಮಾತನಾಡಿ ಕನ್ನಡ ನೆಲ, ಜಲ, ಬಾಷೆಯ ಬಗ್ಗೆ ಪ್ರತಿಯೊಬ್ಬರೂ ಗೌರವ ಹೊಂದಿರಬೇಕು, ಜೊತೆಗೆ ಸಮಾಜದಲ್ಲಿನ ಓರೆ, ಕೋರೆಗಳ ಬಗ್ಗೆ ಗಂಭೀರ ನಿರ್ಧಾರ ಕೈಗೊಂಡಾಗ ಮಾತ್ರ ಸಂಘಟನೆಗಳನ್ನು ಹುಟ್ಟು ಹಾಕಿದ್ದು ಸಾರ್ಥಕವಾಗುತ್ತದೆ. ಅದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಾಗಿರಬೇಕು ಎಂದು ಹೇಳಿದರು.

ಈ ವೇಳೆ ತಾಲ್ಲೂಕ ಯುವ ಘಟಕದ ಅಧ್ಯಕ್ಷ ಶರಣಪ್ಪ ಕಾಳಿ ಅವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಗ್ರಾಮದ ದಳಪತಿಗಳಾದ ಹನುಮಗೌಡ ಪೊ.ಪಾಟೀಲ್, ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರು, ಮಾಜಿ ಎಸ್.ಡಿ.ಎಂ.ಸಿ.ಅಧ್ಯಕ್ಷ ಶಿವಮೂರ್ತಿಪ್ಪ ಕಾಳಿ, ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಂಜುನಾಥ ಗಟ್ಟೆಪ್ಪನವರ್, ರಾಮರಾವ್ ಕುಲಕರ್ಣಿ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಮಹಾಂತಪ್ಪ ಶಿಡ್ನಳ್ಳಿ, ಸುಭಾಸ ಇಳಗೇರ್, ವಿಜಯಕುಮಾರ್ ದಾಸರ್, ಮಾಜಿ ಗ್ರಾಮ ಪಂಚಾಯತಿ ಸದಸ್ಯ ಧರ್ಮಣ್ಣ ಕಾಳಿ,

ಆನಂದ್ ಚೌಡ್ಕಿ, ಸೇರಿದಂತೆ ಗ್ರಾಮದ ಹಿರಿಯರು, ಯುವಕ ಮಿತ್ರರು ಉಪಸ್ಥಿತರಿದ್ದರು.

# ದಿಗಂಬರ ಕರಿಬಸವೇಶ್ವರರ ಪಲ್ಲಕಿ ಉತ್ಸವದಲ್ಲಿ ಶಾಲು ಹೊದಿಸಿ ಹರಕೆ ತಿರೀಸಿದ ಭಕ್ತರು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ತಾಲ್ಲೂಕಿನ ಹುಡಗಿ ಗ್ರಾಮದ ದಿಗಂಬರ ಕರಿಬಸವೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಪಲ್ಲಕ್ಕಿ ಉತ್ಸವ ವಿರೂಪಾಕ್ಷ ಶಿವಾಚಾರ್ಯರು.ಸೋಮೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ವೈಭವದಿಂದ ಜರುಗಿತು ಉತ್ಸವದ ಅಂಗವಾಗಿ 2 ದಿನಗಳ ಕಾಲ ರಾತ್ರಿ ಇಡಿ ಭಜನೆ, ಕೀರ್ತನೆ ಜರುಗಿತು ಬೇಡಿದ ವರ ನೀಡುವ ಕರಿಬಸವೇಶ್ವರರಿಗೆ ಭಕ್ತಾದಿಗಳು ದಾರಿವುದ್ದಕ್ಕು ಶಾಲು ಹೊದಿಸಿ ತಮ್ಮ ಭಕ್ತಿ ಸಮರ್ಪಿಸಿದರು ಅಗ್ನಿ ಕುಂಡದಲ್ಲಿ ಅಗ್ಗಿ ತುಳಿದು ಭಕ್ತಾಧಿಗಳು ತಮ್ಮ ಹರಿಕೆ ತಿರಿಸಿದರು. ಪಲ್ಲಕಿ ಉತ್ಸವದಲ್ಲಿ ಡೊಳ್ಳು ಕುಣಿತ, ಭಜನೆ, ಯುವಕರ ಚಿಟಿಕೆ ಭಜನೆ ತಂಡ, ಕಲಾತಂಡಗಳು ತಮ್ಮ ಕಲೆ ಪ್ರದರ್ಶಿಸಿದರು. ಕರಿಬಸವೇಶ್ವರರ ಜಾತ್ರೆಗೆ ಹಳ್ಳಿ–ಹಳ್ಳಿಗಳಿಂದ ಭಕ್ತರು ಇಲ್ಲಿಗೆ ಆಗಮಿಸಿ ನೈವಿದ್ಯ ಆರ್ಪಿಸಿ ದರ್ಶನ ಪಡೆದರು. ಕರಿಬಸವೇಶ್ವರರ ದೇವರ ಪಲ್ಲಕ್ಕಿ ಉತ್ಸವದಲ್ಲಿ ಚನ್ನಮಲ್ಲಯ್ಯಸ್ವಾಮಿ, ಮಾದೇವಯ್ಯ ಸ್ವಾಮಿ, ಬಸವರಾಜ್ ಮುಗಳಿ. ಮಹಾಂತೇಶ್ ನಂದಿ, ನಾಗೇಶ್ ವಲ್ದೊಡ್ಡಿ, ಚೆನ್ನಬಸಪ್ಪ ಕನ್ನಶೆಟ್ಟಿ, ನಿಖಿಲ್ ಹಳ್ಳಿಖೇಡಕರ್, ಕಾಶಪ್ಪ, ಶರಣಬಸಪ್ಪ ಮುಗಳಿ, ಶಿವನಂದ ವಳದೊಡ್ಡಿ. ಪ್ರಕಾಶ್ ಮುಗಳಿ. ದಯಾನಂದ್ ಪಂಚಾಳ, ಅಶೋಕ್ ಬೆಳಮಗಿ, ಸಂಗಪ್ಪ ಮಲ್ಲಶೆಟ್ಟಿ, ಶಿವಶಂಕರ್ ಹಿರೇಮಠ್. ವೀರಭದ್ರ, ಶಿವಾನಂದ್ ಪೆದ್ದಿ, ಶ್ರವಣ್ ಭೀಮ್ ಶೆಟ್ಟಿ, ವಿನೋದ್ ಭೀಮ್ ಶೆಟ್ಟಿ. ಸಂಗಪ್ಪ ಹೂಗಾರ್. ದಯಾನಂದ್ ಸಿಂಧನಕೇರಾ. ಸುಭಾಷ್ ಕನ್ನಶೆಟ್ಟಿ. ಶರಣು ಸಿಂಧನಕೇರಾ, ಚನ್ನಬಸವ ಮಲ್ಲಶೆಟ್ಟಿ. ಬಸವ ಮಲ್ಲಶೆಟ್ಟಿ, ಓಂಕಾರ್ ಮುಗಳಿ. ರೇವಣಸಿದ್ದಪ್ಪ ಸಾತಾ, ಚೇತನ್ ಉಡಬನಳ್ಳಿ, ರವಿ ಗಡ್ಡೆನೋರ್. ಇವರುಗಳು ಪಲ್ಲಕಿ ಉತ್ಸವ ಸೇವೆ ಮಾಡಿದರು. ಬಿಜೆಪಿ ಓಬಿಸಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ದಯಾನಂದ ಮೇತ್ರಿ ರವರ ಪರಿವಾರದಿಂದ ಶಾಲು ಹೊದಿಸಿ ದೇವರಿಗೆ ಆರತಿ ಬೆಳಗುವ ಮೂಲಕ ದರ್ಶನ ಪಡೆದರು. ಈ ಸಂದರ್ಭದಲ್ಲಿ ಅರುಣ್ ಕುಮಾರ್ ಮೇತ್ರಿ. ಶ್ರೀದೇವಿ ಮೇತ್ರಿ. ಉಷಾ ಮೇತ್ರಿ.ಭಾರತಿ ಮೇತ್ರಿ. ರಂಜಿತ ಮೇತ್ರಿ . ಕಾವೇರಿ ಭಂಡಾರಿ. ಸಾಯಿವೀರ. ಹರ್ಷಿತ. ದಿವ್ಯ. ಗಗನ್. ದೀಕ್ಷಾ. ಆಯುಷ್ ಉಪಸ್ಥಿತರಿದ್ದರು.

